# المختصر في صفة الحج )للجمعية(

# ಹಜ್ಜ್ ನಿರ್ವಹಿಸುವ ವಿಧಾನ - ಸಂಕ್ಷಿಪ್ತವಾಗಿ

## ಹಜ್ಜ್ ನಿರ್ವಹಿಸುವ ವಿಧಾನ - ಸಂಕ್ಷಿಪ್ತವಾಗಿ

ಸರ್ವಸ್ತುತಿಗಳು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಮೀಸಲು. ನಮ್ಮ ಪ್ರವಾದಿ ಮುಹಮ್ಮದ್(ಸ)ರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಎಲ್ಲಾ ಸಹಚರರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ.

ಮುಂದುವರಿದು ಹೇಳುವುದೇನೆಂದರೆ:

ಇದು ಹಜ್‌ನ ವಿವರಣೆಯ ಒಂದು ಸಂಕ್ಷಿಪ್ತ ಕೃತಿಯಾಗಿದೆ. ಇದರಲ್ಲಿ ನಾವು ಹಜ್ಜ್ ಯಾತ್ರಿಕರಿಗೆ ಅಗತ್ಯವಿರುವ ಬಹುವಂಶ ವಿಷಯಗಳನ್ನು ವಿವರಿಸಲು ಪ್ರಯತ್ನಿಸಿದ್ದೇವೆ.

ಅಲ್ಲಾಹು ಇದನ್ನು ತನ್ನ ಪವಿತ್ರ ಮುಖವನ್ನು ಮಾತ್ರ ಬಯಸುವ ಹಾಗೂ ಎಲ್ಲಾ ಮುಸ್ಲಿಮರಿಗೂ ಪ್ರಯೋಜನ ನೀಡುವ ಕೃತಿಯಾಗಿ ಮಾಡಲಿ ಎಂದು ನಾವು ಬೇಡಿಕೊಳ್ಳುತ್ತೇವೆ.

ವಿವಿಧ ಭಾಷೆಗಳಲ್ಲಿ ಇಸ್ಲಾಮಿ ವಿಷಯಗಳ ಸೇವಾ ಸಮಿತಿಯ ಜ್ಞಾನ ಮಂಡಳಿ

## ಮುನ್ನುಡಿ

## ಮೊದಲನೆಯದಾಗಿ: ಆರಾಧನೆಯು ಸ್ವೀಕಾರವಾಗಲು ಷರತ್ತುಗಳು:

ಅಲ್ಲಾಹು ಆರಾಧನೆಯನ್ನು ಸ್ವೀಕರಿಸಬೇಕಾದರೆ ಅದು ಎರಡು ಷರತ್ತುಗಳನ್ನು ಪೂರೈಸಿರಬೇಕು:

1. ಇಖ್ಲಾಸ್ (ನಿಷ್ಕಳಂಕತೆ): ಅಂದರೆ ಆ ಆರಾಧನೆಯನ್ನು ಮಾಡುವ ಮೂಲಕ ಅಲ್ಲಾಹನ

ಸಂಪ್ರೀತಿ ಮತ್ತು ಪರಲೋಕವನ್ನು ಮಾತ್ರ ಉದ್ದೇಶಿಸುವುದು. ಅಲ್ಲಾಹು ಹೇಳುತ್ತಾನೆ:

﴿وَمَآ أُمِرُوٓاْ إِلَّا لِيَعۡبُدُواْ ٱللَّهَ مُخۡلِصِينَ لَهُ ٱلدِّينَ حُنَفَآءَ...﴾"،

"ಧರ್ಮವನ್ನು ಅಲ್ಲಾಹನಿಗೆ ನಿಷ್ಕಳಂಕಗೊಳಿಸಿ, ಏಕನಿಷ್ಠೆಯಿಂದ ಅವನನ್ನು ಮಾತ್ರ ಆರಾಧಿಸಿರಿ ಎಂದಲ್ಲದೆ ಇನ್ನೇನನ್ನೂ ಅವರಿಗೆ ಆದೇಶಿಸಲಾಗಿಲ್ಲ."[1] [ಅಲ್-ಬಯ್ಯಿನ: 5]

ಪ್ರವಾದಿ (ಸ) ರವರು ಹೇಳಿದರು:

«إِنَّمَا الْأَعْمَالُ بِالنِّيَّاتِ، وَإِنَّمَا لِكُلِّ امْرِئٍ مَا نَوَى».

"ಕರ್ಮಗಳು ಕೇವಲ ನಿಯ್ಯತ್‌ಗಳ (ಉದ್ದೇಶಗಳ) ಮೇಲೆ ಅವಲಂಬಿತವಾಗಿವೆ. ಪ್ರತಿಯೊಬ್ಬ ವ್ಯಕ್ತಿಯೂ ಅವನು ಉದ್ದೇಶಿಸಿದ್ದನ್ನು ಮಾತ್ರ ಪಡೆಯುತ್ತಾನೆ."[2]

2. ಪ್ರವಾದಿ (ಸ) ರನ್ನು ಅನುಸರಿಸುವುದು: ಅಂದರೆ ಆರಾಧನೆಯಲ್ಲಿರುವ ಮಾತು ಮತ್ತು ಕ್ರಿಯೆಗಳೆಲ್ಲವೂ ಪ್ರವಾದಿ(ಸ) ರವರು ಕಲಿಸಿಕೊಟ್ಟಂತೆ ಇರುವುದು. ಪ್ರವಾದಿ (ಸ) ರವರು ಹೇಳಿದರು:

«مَنْ أَحْدَثَ فِي أَمْرِنَا هَذَا مَا لَيْسَ فِيهِ فَهُوَ رَدٌّ».

"ನಮ್ಮ ಈ ವಿಷಯದಲ್ಲಿ (ಧರ್ಮದಲ್ಲಿ) ಅದಕ್ಕೆ ಸೇರದ ಯಾವುದನ್ನಾದರೂ ಯಾರಾದರೂ ಸೇರಿಸಿದರೆ, ಅದು ತಿರಸ್ಕೃತವಾಗಿದೆ."[3] [ಬುಖಾರಿ

---

[1] ಅಂದರೆ: ಅಲ್ಲಾಹನ ಕಡೆಗೆ ಮತ್ತು ಅವನ ಆರಾಧನೆಯ ಕಡೆಗೆ ಮುಖ ಮಾಡುವುದು ಹಾಗೂ ಅವನ ಹೊರತಾದ ಎಲ್ಲದರಿಂದ ದೂರವಾಗುವುದು. [ತಫ್ಸೀರ್ ಸಅದಿ (ಪುಟ 538)]

[2] ಬುಖಾರಿ, ಸಂಖ್ಯೆ (1), ಮುಸ್ಲಿಮ್, ಸಂಖ್ಯೆ (1907).

[3] ಬುಖಾರಿ, ಸಂಖ್ಯೆ (2697), ಮುಸ್ಲಿಮ್, ಸಂಖ್ಯೆ (1718).

(2697) ಮತ್ತು ಮುಸ್ಲಿಂ (1718)]. ಮುಸ್ಲಿಂರ ಇನ್ನೊಂದು ವರದಿಯಲ್ಲಿ (1718) ಹೀಗಿದೆ:

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ».

"ನಮ್ಮ ಆದೇಶವಿಲ್ಲದ ಒಂದು ಕಾರ್ಯವನ್ನು ಯಾರಾದರೂ ಮಾಡಿದರೆ, ಅದು ತಿರಸ್ಕೃತವಾಗಿದೆ."[1]

***

## ಮೊದಲನೆಯದಾಗಿ: ಮೀಖಾತ್‌ನ ನಿಯಮಗಳು:

ಮೀಖಾತ್: ಮೀಖಾತ್ ಎಂದರೆ ಹಜ್ ಅಥವಾ ಉಮ್ರಾ ನಿರ್ವಹಿಸಲು ಬಯಸುವವರು ಇಹ್ರಾಮ್‌ಗೆ ಪ್ರವೇಶಿಸಲು ಪ್ರವಾದಿ (ಸ) ರವರು ನಿಗದಿಪಡಿಸಿದ ಸ್ಥಳಗಳು.

ಹಜ್ ಅಥವಾ ಉಮ್ರಾ ಮಾಡಲು ಉದ್ದೇಶಿಸಿ ಯಾರಾದರೂ ಈ ಸ್ಥಳಗಳಲ್ಲಿ ಒಂದನ್ನು ತಲುಪಿದರೆ, ಅವರು ಅಲ್ಲಿಂದಲೇ ಇಹ್ರಾಮ್‌ಗೆ ಪ್ರವೇಶಿಸುವುದು ಕಡ್ಡಾಯವಾಗಿದೆ. ಇಹ್ರಾಮ್‌ಗೆ ಪ್ರವೇಶಿಸದೆ ಅದನ್ನು ದಾಟಲು ಅವರಿಗೆ ಅನುಮತಿಯಿಲ್ಲ.

ಈ ಮೀಖಾತ್‌ನ ಸ್ಥಳಗಳಿಗಿಂತಲೂ ಮಕ್ಕಾಗೆ ಹತ್ತಿರವಿರುವವರ ಮೀಖಾತ್ ಅವರು ಇರುವ ಸ್ಥಳಗಳಾಗಿವೆ. ಅವರು ಅಲ್ಲಿಂದಲೇ ಹಜ್ ಮತ್ತು ಉಮ್ರಾಕ್ಕಾಗಿ ಇಹ್ರಾಮ್‌ಗೆ ಪ್ರವೇಶಿಸಬೇಕು.

ಮಕ್ಕಾ ನಿವಾಸಿಗಳು ಮತ್ತು ಮಕ್ಕಾದಲ್ಲಿ ವಾಸಿಸುವವರು, ಮಕ್ಕಾದಿಂದಲೇ ಹಜ್‌ಗಾಗಿ

---

[1] ಮುಸ್ಲಿಮ್, ಸಂಖ್ಯೆ (1718).

ಇಹ್ರಾಮ್‌ಗೆ ಪ್ರವೇಶಿಸಬೇಕು. ಆದರೆ ಉಮ್ರಾಕ್ಕಾಗಿ ಇಹ್ರಾಮ್ ಪ್ರವೇಶಿಸುವುದಾದರೆ, ಅವರು ಹಿಲ್ಲ್‌ಗೆ (ಮೀಖಾತ್‌ನ ಹೊರಗಿನ ಪ್ರದೇಶಕ್ಕೆ) ಹೋಗಿ ಅಲ್ಲಿಂದ ಇಹ್ರಾಮ್‌ಗೆ ಪ್ರವೇಶಿಸಬೇಕು. ಉದಾಹರಣೆಗೆ ತನ್‌ಈಮ್ ಮುಂತಾದ ಸ್ಥಳಗಳು.

ವಿಮಾನದಲ್ಲಿ ಪ್ರಯಾಣಿಸುವವರು ವಿಮಾನವು ಮೀಖಾತ್‌ಗೆ ಸಮೀಪಿಸಿದಾಗ ಇಹ್ರಾಮ್‌ಗೆ ಪ್ರವೇಶಿಸಬೇಕು. ಆದ್ದರಿಂದ ಅವರು ಮೀಖಾತ್‌ಗೆ ಸಮೀಪಿಸುವ ಮೊದಲೇ ಸಿದ್ಧರಾಗಿ ಇಹ್ರಾಮ್‌ನ ಬಟ್ಟೆಗಳನ್ನು ಧರಿಸಬೇಕು. ವಿಮಾನವು ಮೀಖಾತ್‌ಗೆ ಸಮಾನಾಂತರದಲ್ಲಿರುವಾಗ ತಕ್ಷಣವೇ ಇಹ್ರಾಮ್‌ನ ನಿಯ್ಯತ್ ಮಾಡಬೇಕು. ವಿಮಾನ ನಿಲ್ದಾಣದಲ್ಲಿ ಇಳಿಯುವವರೆಗೆ ಅದನ್ನು ವಿಳಂಬ ಮಾಡಲು ಅವರಿಗೆ ಅನುಮತಿ ಇಲ್ಲ. ವಿಮಾನದ ವೇಗದಿಂದಾಗಿ ಮೀಖಾತ್‌ನ ಸ್ಥಳವನ್ನು ಕಳೆದುಕೊಳ್ಳುವ ಭಯವಿದ್ದರೆ, ಅವರು ಮೀಖಾತ್‌ಗೆ ಸಮೀಪಿಸುವ ಮೊದಲೇ ತಲ್ಬಿಯಾ ಹೇಳುವ ಮೂಲಕ ಮುನ್ನೆಚ್ಚರಿಕೆ ವಹಿಸಬಹುದು.

## ಎರಡನೆಯದಾಗಿ: ಹಜ್ಜ್ ಕರ್ಮದ ವಿಧಗಳು ಮತ್ತು ಅವುಗಳ ನಿಯಮಗಳು:

ಹಜ್ಜ್ ಕರ್ಮವನ್ನು ಮೂರು ವಿಧಗಳಲ್ಲಿ ನಿರ್ವಹಿಸಬಹುದು: ತಮತ್ತುಅ, ಇಫ್ರಾದ್ ಮತ್ತು ಕಿರಾನ್.

ಹದಿ (ಕುರ್ಬಾನಿ ಪ್ರಾಣಿ) ಯನ್ನು ತರದವರಿಗೆ ತಮತ್ತುಅ ವಿಧವು ಅತ್ಯುತ್ತಮವಾಗಿದೆ. ತಮತ್ತುಅ

ಎಂದರೆ: ಹಜ್‌ನ ತಿಂಗಳುಗಳಲ್ಲಿ ಉಮ್ರಾ ನಿರ್ವಹಿಸುವುದಕ್ಕಾಗಿ ಇಹ್ರಾಮ್‌ಗೆ ಪ್ರವೇಶಿಸುವುದು, ತವಾಫ್ ಮತ್ತು ಸಈ ಮಾಡುವುದು ಮತ್ತು ಇಹ್ರಾಮ್‌ನಿಂದ ಹೊರಬರುವುದು. ನಂತರ ಅದೇ ವರ್ಷದಲ್ಲಿ ಹಜ್ ನಿರ್ವಹಿಸುವುದಕ್ಕಾಗಿ ಇಹ್ರಾಮ್‌ಗೆ ಪ್ರವೇಶಿಸುವುದು.

ಇಫ್ರಾದ್ ಎಂದರೆ: ಕೇವಲ ಹಜ್ ನಿರ್ವಹಿಸುವುದಕ್ಕಾಗಿ ಮಾತ್ರ ಇಹ್ರಾಮ್‌ಗೆ ಪ್ರವೇಶಿಸುವುದು. ಮಕ್ಕಾವನ್ನು ತಲುಪಿದರೆ, ತವಾಫುಲ್ ಕುದೂಮ್ (ಆಗಮನದ ತವಾಫ್) ನಿರ್ವಹಿಸುವುದು ಮತ್ತು ನಂತರ ಹಜ್‌ಗಾಗಿ ಸಈ ಮಾಡುವುದು ಸುನ್ನತ್ ಆಗಿದೆ. ಆದರೆ ತಲೆ ಬೋಳಿಸಬಾರದು ಅಥವಾ ಕೂದಲು ಕತ್ತರಿಸಬಾರದು. ಇಹ್ರಾಮ್‌ನಿಂದ ಹೊರಬರಲೂಬಾರದು. ಬದಲಿಗೆ, ಈದ್ ದಿನದಂದು ಜಮ್ರತುಲ್ ಅಖಬಕ್ಕೆ ಕಲ್ಲು ಎಸೆದ ನಂತರ ಇಹ್ರಾಮ್‌ನಿಂದ ಹೊರಬರುವವರೆಗೂ ಇಹ್ರಾಮ್‌ನಲ್ಲಿಯೇ ಇರಬೇಕು. ಹಜ್ಜ್‌ನ ಸಈಯನ್ನು ಹಜ್‌ನ ತವಾಫ್ ನಿರ್ವಹಿಸುವ ತನಕ ವಿಳಂಬಗೊಳಿಸಿದರೆ, ಅದರಲ್ಲಿ ಯಾವುದೇ ತಪ್ಪಿಲ್ಲ.

ಕಿರಾನ್ ಎಂದರೆ: ಉಮ್ರಾ ಮತ್ತು ಹಜ್ ಎರಡನ್ನೂ ಒಟ್ಟಿಗೆ ನಿರ್ವಹಿಸಲು ಇಹ್ರಾಮ್‌ಗೆ ಪ್ರವೇಶಿಸುವುದು, ಮತ್ತು ಹೀಗೆ ಹೇಳುವುದು: "ಲಬ್ಬೈಕಲ್ಲಾಹುಮ್ಮ ಉಮ್ರತನ್ ವ ಹಜ್ಜನ್" (ಓ ಅಲ್ಲಾಹ್, ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ, ಉಮ್ರಾ ಮತ್ತು ಹಜ್‌ಗಾಗಿ."

ಕಿರಾನ್ ಮಾಡುವವರ ಹಜ್ಜ್ ಕರ್ಮಗಳು ಇಫ್ರಾದ್ ಮಾಡುವವರ ಹಜ್ಜ್ ಕರ್ಮಗಳಂತೆಯೇ ಇರುತ್ತದೆ. ಆದರೆ ಕಿರಾನ್ ಮಾಡುವವರು ಹದಿಯನ್ನು (ಕುರ್ಬಾನಿ ಪ್ರಾಣಿ) ಬಲಿ ಅರ್ಪಿಸಬೇಕು. ಆದರೆ ಇಫ್ರಾದ್ ಮಾಡುವವರು ಹದಿಯನ್ನು ಅರ್ಪಿಸಬೇಕಾಗಿಲ್ಲ.

## ಮೂರನೆಯದಾಗಿ: ಇಹ್ರಾಮ್ ಪ್ರವೇಶಿಸುವ ವಿಧಾನ ಮತ್ತು ಅದರ ನಿಯಮಗಳು:

ಇಹ್ರಾಮ್‌ಗೆ ಪ್ರವೇಶಿಸಲು ಬಯಸುವವರು ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕು:

1. ಸ್ನಾನ ಮಾಡುವುದು (ಗುಸ್ಲ್): ಇದು ಪುರುಷರು ಮತ್ತು ಮಹಿಳೆಯರಿಗೆ - ಮುಟ್ಟಾದ ಮತ್ತು ಹೆರಿಗೆ ಸ್ರಾವವನ್ನು ಹೊಂದಿರುವ ಮಹಿಳೆಯರಿಗೂ ಸಹ - ಪ್ರಬಲ ಸುನ್ನತ್ ಆಗಿದೆ.

2. ಸುಗಂಧ ದ್ರವ್ಯ ಬಳಸುವುದು: ಊದ್ ಎಣ್ಣೆ ಮುಂತಾದ ಅತ್ಯುತ್ತಮವಾದ ಸುಗಂಧವನ್ನು ತಲೆ ಮತ್ತು ಗಡ್ಡಕ್ಕೆ ಹಚ್ಚಬೇಕು. ಇಹ್ರಾಮ್‌ಗೆ ಪ್ರವೇಶಿಸಿದ ನಂತರ ಅದರ ಸುಗಂಧ ಉಳಿದರೂ ಅದರಿಂದ ಯಾವುದೇ ತೊಂದರೆಯಿಲ್ಲ. ಆದರೆ ಮಹಿಳೆಯರು ಸುಗಂಧ ದ್ರವ್ಯವನ್ನು ಹಚ್ಚಬಾರದು. ಏಕೆಂದರೆ ಅದಕ್ಕೆ ಪರಿಮಳವಿರುವುದರಿಂದ ಪರ ಪುರುಷರು ಅದನ್ನು ಅನುಭವಿಸುವ ಸಾಧ್ಯತೆಯಿದೆ.

3. ಇಹ್ರಾಮ್‌ನ ಬಟ್ಟೆಗಳನ್ನು ಧರಿಸುವುದು: ಇದು ಇಝಾರ್ (ಸೊಂಟದ ಕೆಳಗೆ ಧರಿಸುವ ಕೆಳವಸ್ತ್ರ) ಮತ್ತು ರಿದಾ (ಸೊಂಟದ ಮೇಲೆ ಧರಿಸುವ ಮೇಲ್ವಸ್ತ್ರ).

ಇವೆರಡು ಬಿಳಿ ಬಣ್ಣದ್ದಾಗಿರುವುದು ಮತ್ತು ಸ್ವಚ್ಛವಾಗಿರುವುದು ಅಥವಾ ಹೊಸದಾಗಿರುವುದು ಸುನ್ನತ್ ಆಗಿದೆ. ಮಹಿಳೆಯರು ಅವರು ಇಷ್ಟಪಡುವ ಯಾವುದೇ ಬಟ್ಟೆಯನ್ನು ಧರಿಸಿ ಇಹ್ರಾಮ್‌ಗೆ ಪ್ರವೇಶಿಸಬಹುದು. ಆದರೆ ಅದು ಸೌಂದರ್ಯವನ್ನು ಪ್ರಕಟಿಸುವಂತಿರಬಾರದು. ಅದೇ ರೀತಿ, ಅವಳು ನಿಖಾಬ್ (ಮುಖದ ಮುಸುಕು) ಮತ್ತು ಕೈಗವಸುಗಳನ್ನು ಧರಿಸಬಾರದು. ಮುಖ ಮತ್ತು ಕೈಗಳನ್ನು ಬೇರೆ ಯಾವುದಾದರೂ ಬಟ್ಟೆಯಿಂದ ಮುಚ್ಚಿಕೊಳ್ಳಬೇಕು.

4. ಯಾವುದಾದರೂ ನಮಾಝ್ ನಿರ್ವಹಿಸಿದ ನಂತರ ಇಹ್ರಾಮ್‌ಗೆ ಪ್ರವೇಶಿಸುವುದು: ಅದು ಫರ್ದ್ (ಕಡ್ಡಾಯ) ನಮಾಝ್ ಅಥವಾ ನಫಿಲ್ (ಐಚ್ಛಿಕ) ನಮಾಝ್ ಆಗಿರಬಹುದು. ಆದರೆ ಈ ನಿಯಮ ಕಡ್ಡಾಯವಲ್ಲ.

5. ಉಮ್ರಾ ನಿರ್ವಹಿಸುವವರು, "ಲಬ್ಬೈಕಲ್ಲಾಹುಮ್ಮ ಉಮ್ರತನ್" (ಓ ಅಲ್ಲಾಹ್, ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ, ಉಮ್ರಾದೊಂದಿಗೆ) ಎಂದು ಹೇಳುವುದು. ಇಫ್ರಾದ್ ರೀತಿಯಲ್ಲಿ ಹಜ್ಜ್ ನಿರ್ವಹಿಸುವವರು, "ಲಬ್ಬೈಕಲ್ಲಾಹುಮ್ಮ ಹಜ್ಜನ್" (ಓ ಅಲ್ಲಾಹ್, ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ, ಹಜ್ಜ್‌ನೊಂದಿಗೆ) ಎಂದು ಹೇಳುವುದು. ಕಿರಾನ್ ರೀತಿಯಲ್ಲಿ ಹಜ್ಜ್ ನಿರ್ವಹಿಸುವವರು, "ಲಬ್ಬೈಕಲ್ಲಾಹುಮ್ಮ ಉಮ್ರತನ್ ವ ಹಜ್ಜನ್" (ಓ ಅಲ್ಲಾಹ್, ನಾನು ನಿನ್ನ ಕರೆಗೆ

ಉತ್ತರಿಸುತ್ತಿದ್ದೇನೆ, ಉಮ್ರಾ ಮತ್ತು ಹಜ್ಜ್‌ನೊಂದಿಗೆ) ಎಂದು ಹೇಳುವುದು.

6. ಇಹ್ರಾಮ್‌ಗೆ ಪ್ರವೇಶಿಸಲು ಬಯಸುವವರು ತಮ್ಮ ಹಜ್ಜ್ ಕರ್ಮಗಳನ್ನು ಪೂರ್ಣಗೊಳಿಸುವುದಕ್ಕೆ ಏನಾದರೂ ಅಡ್ಡಿಯಾಗಬಹುದೆಂಬ ಭಯವಿದ್ದರೆ, ಇಹ್ರಾಮ್‌ಗೆ ಪ್ರವೇಶಿಸುವಾಗ ಷರತ್ತು ವಿಧಿಸಿ ಹೀಗೆ ಹೇಳಬಹುದು: "...ವ ಇನ್ ಹಬಸನೀ ಹಾಬಿಸುನ್ ಫಮಹಲ್ಲೀ ಹೈಸು ಹಬಸ್ತನೀ" (ಮತ್ತು ಯಾವುದಾದರೂ ಅಡ್ಡಿಯು ನನ್ನನ್ನು ತಡೆದರೆ, ನೀನು ನನ್ನನ್ನು ತಡೆದ ಸ್ಥಳವೇ ನನ್ನ ಇಹ್ರಾಮ್‌ನಿಂದ ಹೊರಬರುವ ಸ್ಥಳ). ಈ ಷರತ್ತು ವಿಧಿಸಿದವರಿಗೆ ಹಜ್ಜ್ ಕರ್ಮಗಳನ್ನು ಪೂರ್ಣಗೊಳಿಸುವುದಕ್ಕೆ ಏನಾದರೂ ಅಡ್ಡಿಯುಂಟಾದರೆ, ಅವನು ಇಹ್ರಾಮ್‌ನಿಂದ ಹೊರಬರಬಹುದು. ಅವರು ಏನೂ ಪ್ರಾಯಶ್ಚಿತ್ತವಾಗಿ ಕೊಡಬೇಕಾಗಿಲ್ಲ.

7. ನಂತರ ಹೆಚ್ಚು ಹೆಚ್ಚು ತಲ್ಬಿಯಾ ಹೇಳುವುದು: "ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್, ಇನ್ನಲ್ ಹಮ್ದ ವನ್ನಿಅಮತ ಲಕ ವಲ್ ಮುಲ್ಕ್ ಲಾ ಶರೀಕ ಲಕ್". ಪುರುಷರು ಧ್ವನಿಯನ್ನು ಎತ್ತಿ ಹೇಳಬೇಕು. ಹತ್ತಿರದಲ್ಲಿ ಪರ ಪುರುಷರು ಇಲ್ಲದಿದ್ದರೆ ಮಹಿಳೆಯರೂ ಸಹ ಧ್ವನಿಯನ್ನು ಎತ್ತಿ ಹೇಳಬೇಕು. ಇಹ್ರಾಮ್‌ನಲ್ಲಿರುವವರು ತಲ್ಬಿಯಾವನ್ನು ಹೆಚ್ಚು ಹೆಚ್ಚಾಗಿ ಹೇಳಬೇಕು. ವಿಶೇಷವಾಗಿ ಪರಿಸ್ಥಿತಿಗಳು

ಮತ್ತು ಸಮಯಗಳು ಬದಲಾಗುವಾಗ. ಉದಾಹರಣೆಗೆ ಎತ್ತರವಾದ ಸ್ಥಳಕ್ಕೆ ಏರಿದಾಗ ಅಥವಾ ತಗ್ಗು ಪ್ರದೇಶಕ್ಕೆ ಇಳಿದಾಗ ಅಥವಾ ರಾತ್ರಿ ಅಥವಾ ಹಗಲು ಬಂದಾಗ.[1]

8. ಉಮ್ರಾದಲ್ಲಿ ಇಹ್ರಾಮ್‌ನಿಂದ ತವಾಫ್ ಪ್ರಾರಂಭಿಸುವವರೆಗೆ ಮತ್ತು ಹಜ್‌ನಲ್ಲಿ ಇಹ್ರಾಮ್‌ನಿಂದ ಈದ್ ದಿನದಂದು ಜಮ್ರತುಲ್ ಅಖಬಕ್ಕೆ ಕಲ್ಲು ಎಸೆಯಲು ಪ್ರಾರಂಭಿಸುವವರೆಗೆ ತಲ್ಬಿಯ ಹೇಳುತ್ತಿರಬೇಕು.

9. ಇಹ್ರಾಮ್‌ನಲ್ಲಿರುವವರು ಇಹ್ರಾಮ್‌ನಿಂದ ಹೊರಬರುವವರೆಗೆ ಇಹ್ರಾಮ್‌ನ ನಿಷಿದ್ಧ ಕಾರ್ಯಗಳಲ್ಲಿ ಯಾವುದೂ ಸಂಭವಿಸದಂತೆ ಎಚ್ಚರಿಕೆ ವಹಿಸುವುದು ಕಡ್ಡಾಯವಾಗಿದೆ.

---

[1] "ಲಬ್ಬೈಕ್" ಎಂಬ ಪದದ ಅರ್ಥ: ಓ ನನ್ನ ಒಡೆಯನೇ, ನಾನು ನಿನ್ನ ಕರೆಗೆ ಪದೇ ಪದೇ ಉತ್ತರಿಸುತ್ತಿದ್ದೇನೆ. ಇದರ ಅರ್ಥ ಮನುಷ್ಯನು ತನ್ನ ಒಡೆಯನಿಗೆ ಉತ್ತರಿಸುವುದು ಮತ್ತು ಅವನ ವಿಧೇಯತೆಗಾಗಿ ಕಾರ್ಯೋನ್ಮುಖನಾಗುವುದು. "ಇನ್ನಲ್ ಹಮ್ದ ವನ್ನಿಅಮತ ಲಕ ವಲ್ ಮುಲ್ಕ್" - "ಅಲ್-ಹಮ್ದ್" ಎಂದರೆ ಸ್ತುತಿಸಲ್ಪಡುವವನನ್ನು ಪ್ರೀತಿ ಮತ್ತು ಗೌರವದೊಂದಿಗೆ ಪರಿಪೂರ್ಣನೆಂದು ಬಣ್ಣಿಸುವುದು. ಇದನ್ನು ಮತ್ತೆ ಮತ್ತೆ ಹೇಳಿದರೆ ಅದು ಹೊಗಳಿಕೆಯಾಗುತ್ತದೆ. "ಅನ್ನಿಅಮತ್" ಎಂದರೆ ಅಲ್ಲಾಹು ತನ್ನ ದಾಸರಿಗೆ ಅವರು ಬಯಸುವುದನ್ನು ಪಡೆಯಲು ಮತ್ತು ಅವರು ದ್ವೇಷಿಸುವುದನ್ನು ದೂರೀಕರಿಸಲು ದಯಪಾಲಿಸುವ ಅನುಗ್ರಹಗಳು. "ಅಲ್-ಮುಲ್ಕ್" ಎಂದರೆ ಆಧಿಪತ್ಯವು ನಿನಗೆ ಸೇರಿದೆ. ಅಲ್ಲಾಹು ಮಾತ್ರ ಮಾಲೀಕ. "ಲಾ ಶರೀಕ ಲಕ್" ಅಂದರೆ ಅಲ್ಲಾಹನಿಗೆ ಮಾತ್ರ ವಿಶೇಷವಾಗಿರುವ ಪರಿಪೂರ್ಣ ಗುಣಲಕ್ಷಣಗಳಾದ ಆಧಿಪತ್ಯ, ಸೃಷ್ಟಿ, ನಿರ್ವಹಣೆ, ದೈವಿಕತೆ ಮುಂತಾದವುಗಳಲ್ಲಿ ಅವನಿಗೆ ಯಾವುದೇ ಸಹಭಾಗಿಗಳಿಲ್ಲ. [ಉಸೈಮೀನ್ ರವರ ಮಜ್ಮೂಉ ಫತಾವಾ ವ ರಸಾಇಲ್ (22/96) ಸಂಕ್ಷಿಪ್ತ ರೂಪದಲ್ಲಿ].

## ನಾಲ್ಕನೆಯದಾಗಿ: ಇಹ್ರಾಮ್‌ನ ನಿಷಿದ್ಧಗಳು

ಇಹ್ರಾಮ್‌ನ ನಿಷಿದ್ಧಗಳು ಹೀಗಿವೆ:

1. ದೇಹದ ಯಾವುದೇ ಭಾಗದಿಂದ ಕೂದಲು ಕ್ಷೌರ ಮಾಡುವುದು, ಕತ್ತರಿಸುವುದು ಅಥವಾ ಕಿತ್ತುಹಾಕುವುದು.

2. ಕೈ ಅಥವಾ ಕಾಲುಗಳ ಎಲ್ಲಾ ಉಗುರಗಳನ್ನು ಅಥವಾ ಕೆಲವು ಉಗುರುಗಳನ್ನು ಕತ್ತರಿಸುವುದು.

3. ತಲೆಯನ್ನು ನೇರವಾಗಿ ಸ್ಪರ್ಶಿಸುವಂತೆ ಯಾವುದಾದರೂ ವಸ್ತುವಿನಿಂದ ತಲೆಯನ್ನು ಮುಚ್ಚುವುದು. ಉದಾಹರಣೆಗೆ: ಟೋಪಿ, ಗುತ್ರಾ (ತಲೆಯ ಮೇಲೆ ಧರಿಸುವ ಬಟ್ಟೆ), ರುಮಾಲು, ಮತ್ತು ಮೇಲಂಗಿಯನ್ನು ತಲೆಯ ಮೇಲೆ ಹಾಕುವುದು, ಅಥವಾ ಕರವಸ್ತ್ರ, ಹೊದಿಕೆ, ರಟ್ಟು ಅಥವಾ ಮುಚ್ಚುವ ಉದ್ದೇಶದಿಂದ ಬಳಸುವ ಬೇರೆ ಯಾವುದೇ ವಸ್ತುವನ್ನು ತಲೆಯ ಮೇಲೆ ಹಾಕುವುದು. ಇದು ವಿಶೇಷವಾಗಿ ಪುರುಷರಿಗೆ ಮಾತ್ರ ನಿಷೇಧಿಸಲಾಗಿದೆ. ಮಹಿಳೆಯರಿಗೆ ಅಲ್ಲ.

4. ಯಾವಾಗಲೂ ಧರಿಸುವ ರೀತಿಯಲ್ಲಿ, ದೇಹದ ಆಕಾರಕ್ಕೆ ತಕ್ಕಂತೆ ಕತ್ತರಿಸಿ ತಯಾರಿಸಿದ ದೈನಂದಿನ ಬಟ್ಟೆಗಳನ್ನು ಧರಿಸುವುದು. ಉದಾಹರಣೆಗೆ: ಹೊಲಿದ ನಿಲುವಂಗಿ, ಪ್ಯಾಂಟ್, ಅಂಗಿ, ಸಾಕ್ಸ್ ಮತ್ತು ಕೈಗವಸುಗಳು. ಇದು ವಿಶೇಷವಾಗಿ ಪುರುಷರಿಗೆ ಮಾತ್ರ ನಿಷೇಧಿಸಲಾಗಿದೆ. ಮಹಿಳೆಯರಿಗೆ ಅಲ್ಲ. ಏಕೆಂದರೆ ಮಹಿಳೆಯರಿಗೆ ಈ ಕೆಳಗಿನವುಗಳನ್ನು ಮಾತ್ರ ನಿಷೇಧಿಸಲಾಗಿದೆ:

* ನಿಖಾಬ್, ಬುರ್ಖಾ ಅಥವಾ ನಿಖಾಬ್ ಅನ್ನು ಹೋಲುವ ಲಿಸಾಮ್ (ಮುಖದ ಮುಸುಕು) ಧರಿಸುವುದು ನಿಷೇಧಿಸಲಾಗಿದೆ. ಆದರೆ ಪರಪುರುಷರ ಮುಂದೆ ಸಾಮಾನ್ಯವಾಗಿ ಮುಖವನ್ನು ಮುಚ್ಚುವ ಬಟ್ಟೆಯಿಂದ ಮುಖವನ್ನು ಮುಚ್ಚಿಕೊಳ್ಳುವುದು ಕಡ್ಡಾಯವಾಗಿದೆ. ಬಟ್ಟೆ ಮುಖವನ್ನು ಸ್ಪರ್ಶಿಸಿದರೂ ತೊಂದರೆಯಿಲ್ಲ. ಬಟ್ಟೆ ಮುಖವನ್ನು ಸ್ಪರ್ಶಿಸುವುದನ್ನು ತಡೆಯಲು ಅವಳು ತನ್ನ ತಲೆಯ ಮೇಲೆ ಬ್ಯಾಂಡೇಜ್ - ಅಥವಾ ಅದರಂತಹ ವಸ್ತುವನ್ನು - ಹಾಕಿಕೊಳ್ಳಬೇಕೆಂಬ ನಿಯಮವಿಲ್ಲ. ಏಕೆಂದರೆ ಅಂತಹ ಒಂದು ನಿಯಮವಿದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ.

* ಕೈಗಳಿಗೆ ಕೈಗವಸುಗಳನ್ನು ಧರಿಸುವುದು ನಿಷೇಧಿಸಲಾಗಿದೆ. ಆದರೆ ಪರಪುರುಷರ ಮುಂದೆ ತನ್ನ ಕೈಗಳನ್ನು ತನ್ನ ಅಬಾಯ (ಪರ್ದಾ) ದೊಳಗೆ ಇಟ್ಟುಕೊಳ್ಳುವ ಮೂಲಕ ಮುಚ್ಚಿಕೊಳ್ಳುವುದು ಕಡ್ಡಾಯವಾಗಿದೆ.

5. ದೇಹಕ್ಕೆ ಅಥವಾ ಇಹ್ರಾಮ್‌ನ ಬಟ್ಟೆಗಳಿಗೆ ಸುಗಂಧ ದ್ರವ್ಯವನ್ನು ಹಚ್ಚುವುದು.

6. ಕಾಡು ಪ್ರಾಣಿಗಳನ್ನು ಕೊಲ್ಲುವುದು ಅಥವಾ ಬೇಟೆಯಾಡುವುದು. ಅವುಗಳನ್ನು ಕೊಲ್ಲದಿದ್ದರೂ ಸಹ.

7. ತನ್ನ ಸ್ವಂತಕ್ಕಾಗಲಿ ಅಥವಾ ಬೇರೆಯವರಿಗಾಗಲಿ ವಿವಾಹ ಪ್ರಸ್ತಾಪ ಮಾಡುವುದು.

8. ವಿವಾಹ ಕರಾರು ಮಾಡಿಕೊಳ್ಳುವುದು.

9. ಯೋನಿಯ ಹೊರತಾದ ಭಾಗಗಳನ್ನು ಸ್ಪರ್ಶಿಸುವುದು. ಉದಾಹರಣೆಗೆ, ಚುಂಬಿಸುವುದು ಮತ್ತು ಕಾಮೋದ್ರೇಕದಿಂದ ಸ್ಪರ್ಶಿಸುವುದು ಇತ್ಯಾದಿ.

10. ಸಂಭೋಗ, ಅಂದರೆ ಯೋನಿಯಲ್ಲಿ ಲೈಂಗಿಕ ಸಂಭೋಗ ಮಾಡುವುದು.

***

## ಐದನೆಯದಾಗಿ: ತವಾಫ್ ಮಾಡುವ ವಿಧಾನ

ಹಜ್ಜ್ ಯಾತ್ರಿಕರು ಮಸ್ಜಿದುಲ್ ಹರಾಮ್‌ಗೆ ತಲುಪಿದರೆ, ತಮ್ಮ ಬಲಗಾಲನ್ನು ಮೊದಲು ಇಟ್ಟು ಮಸೀದಿಯನ್ನು ಪ್ರವೇಶಿಸುವುದು ಮತ್ತು ಮಸೀದಿಗೆ ಪ್ರವೇಶಿಸುವ ಪ್ರಾರ್ಥನೆಯನ್ನು ಹೇಳುವುದು ಸುನ್ನತ್ ಆಗಿದೆ. ಈ ವಿಷಯದಲ್ಲಿ ವರದಿಯಾದ ಅತ್ಯಂತ ಸಹೀಹಾದ ಪ್ರಾರ್ಥನೆ ಹೀಗಿದೆ: "ಅಲ್ಲಾಹುಮ್ಮಫ್ತಹ್ ಲೀ ಅಬ್ವಾಬ ರಹ್ಮತಿಕ್" (ಓ ಅಲ್ಲಾಹ್, ನನಗೆ ನಿನ್ನ ಕರುಣೆಯ ಬಾಗಿಲುಗಳನ್ನು ತೆರೆದುಕೊಡು). ಈ ಪ್ರಾರ್ಥನೆಯನ್ನು ಯಾವುದೇ ಮಸೀದಿಗೆ ಪ್ರವೇಶಿಸುವಾಗಲೂ ಹೇಳಬಹುದು. ಇದು ಮಸ್ಜಿದುಲ್-ಹರಾಮ್‌ಗೆ ಮಾತ್ರ ಸೀಮಿತವಾದ ಪ್ರಾರ್ಥನೆಯಲ್ಲ.

ತವಾಫ್ ಮಾಡುವ ಮೊದಲು ಇದ್ತಿಬಾ ಮಾಡಬೇಕು. ಇದ್ತಿಬಾ ಎಂದರೆ: ತನ್ನ ಮೇಲ್ವಸ್ತ್ರದ ಮಧ್ಯಭಾಗವನ್ನು ತನ್ನ ಬಲಗೈ ಕಂಕುಳಿನಲ್ಲಿಟ್ಟು ಅದರ ಎರಡು ತುದಿಗಳನ್ನು ತನ್ನ ಎಡ ಭುಜದ ಮೇಲೆ ಕಟ್ಟುವುದು. ತವಾಫ್ ಮುಗಿದ ನಂತರ, ಮೇಲ್ವಸ್ತ್ರವನ್ನು ತವಾಫ್‌ಗೆ ಮೊದಲು ಧರಿಸಿದಂತೆ

ಧರಿಸಬೇಕು. ಏಕೆಂದರೆ ಇದ್ತಿಬಾ ಕೇವಲ ತವಾಫ್‌ಗೆ ಮಾತ್ರ ಸಂಬಂಧಿಸಿದ್ದಾಗಿದೆ.

ನಂತರ ಹಜರುಲ್-ಅಸ್ವದ್ (ಕಪ್ಪು ಶಿಲೆ) ನ ಬಳಿಗೆ ಹೋಗಿ, ಬಲಗೈಯಿಂದ ಅದನ್ನು ಸ್ಪರ್ಶಿಸಿ ಚುಂಬಿಸಬೇಕು. ಅದನ್ನು ಚುಂಬಿಸಲು ಸಾಧ್ಯವಾಗದಿದ್ದರೆ, ಕೈಯಿಂದ ಸ್ಪರ್ಶಿಸಿ ಕೈಯನ್ನು ಚುಂಬಿಸಬೇಕು. ಕೈಯಿಂದ ಸ್ಪರ್ಶಿಸಲು ಸಾಧ್ಯವಾಗದಿದ್ದರೆ, ತನ್ನಲ್ಲಿರುವ ಕೋಲು ಮುಂತಾದ ವಸ್ತುವಿನಿಂದ ಅದನ್ನು ಸ್ಪರ್ಶಿಸಿ ಚುಂಬಿಸಬೇಕು. ಅದು ಕೂಡ ಸಾಧ್ಯವಾಗದಿದ್ದರೆ, ಅದರ ಕಡೆಗೆ ಮುಖ ಮಾಡಿ ಕೈಯಿಂದ ಸಂಜ್ಞೆ ಮಾಡಬೇಕು. ಆದರೆ ಕೈಯನ್ನು ಚುಂಬಿಸಬಾರದು. (ಅದನ್ನು ಚುಂಬಿಸುವುದಕ್ಕಾಗಿ ಅಥವಾ ಸ್ಪರ್ಶಿಸುವುದಕ್ಕಾಗಿ) ನೂಕುನುಗ್ಗಲು ಮಾಡಿಕೊಂಡು ಜನರನ್ನು ತಳ್ಳುವುದು ಮತ್ತು ಅವರಿಂದ ತೊಂದರೆ ಅನುಭವಿಸುವುದು ಶ್ರೇಷ್ಠವಾದ ರೀತಿಯಲ್ಲ.

ಅದನ್ನು ಸ್ಪರ್ಶಿಸುವಾಗ ಅಥವಾ ಅದರ ಕಡೆಗೆ ಸಂಜ್ಞೆ ಮಾಡುವಾಗ, "ಅಲ್ಲಾಹು ಅಕ್ಬರ್" (ಅಲ್ಲಾಹು ಅತ್ಯಂತ ದೊಡ್ಡವನು) ಎಂದು ಹೇಳಬೇಕು.

ನಂತರ ಬಲಕ್ಕೆ ತಿರುಗಿ ಕಅಬಾ ತನ್ನ ಎಡಭಾಗದಲ್ಲಿ ಬರುವಂತೆ ಅದಕ್ಕೆ ಪ್ರದಕ್ಷಿಣೆ ಮಾಡಬೇಕು. ರುಕ್ನುಲ್-ಯಮಾನಿಯನ್ನು ತಲುಪಿದಾಗ ಅದನ್ನು ಸ್ಪರ್ಶಿಸಬೇಕು. ಆದರೆ ಚುಂಬಿಸಬಾರದು. ಸ್ಪರ್ಶಿಸಲು ಸಾಧ್ಯವಾಗದಿದ್ದರೆ,

ಅದಕ್ಕಾಗಿ ಜನರನ್ನು ತಳ್ಳಬಾರದು. ಅದರ ಕಡೆಗೆ ಸಂಜ್ಞೆಯನ್ನೂ ಮಾಡಬಾರದು.

ರುಕ್ನುಲ್-ಯಮಾನಿ ಮತ್ತು ಹಜರುಲ್-ಅಸ್ವದ್ ನ ನಡುವೆ ಇದನ್ನು ಪಠಿಸಬೇಕು: "ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್ ವ ಫಿಲ್ ಆಖಿರತಿ ಹಸನತನ್ ವ ಕಿನಾ ಅಧಾಬನ್ನಾರ್" (ನಮ್ಮ ಪರಿಪಾಲಕನೇ, ನಮಗೆ ಇಹಲೋಕದಲ್ಲಿ ಒಳಿತನ್ನು ದಯಪಾಲಿಸು ಮತ್ತು ಪರಲೋಕದಲ್ಲಿ ಒಳಿತನ್ನು ದಯಪಾಲಿಸು, ಮತ್ತು ನಮ್ಮನ್ನು ನರಕದ ಶಿಕ್ಷೆಯಿಂದ ರಕ್ಷಿಸು).

ಹಜರುಲ್-ಅಸ್ವದ್‌ನ ಬಳಿಯಿಂದ ಹಾದುಹೋಗುವಾಗಲೆಲ್ಲಾ ತನ್ನ ಕೈಯಿಂದ ಸಂಜ್ಞೆ ಮಾಡಿ "ಅಲ್ಲಾಹು ಅಕ್ಬರ್" ಎಂದು ಹೇಳಬೇಕು.

ತವಾಫ್‌ನ ಉಳಿದ ಸಮಯದಲ್ಲಿ ತನಗೆ ಇಷ್ಟವಾದ ಯಾವುದೇ ಝಿಕ್ರ್ , ದುಆ ಮತ್ತು ಕುರ್‌ಆನ್ ಪಠಣವನ್ನು ಮಾಡಬಹುದು.

ಮೊದಲ ಮೂರು ಸುತ್ತುಗಳಲ್ಲಿ ಮಾತ್ರ ರಮಲ್ ಮಾಡುವುದು ಸುನ್ನತ್ ಆಗಿದೆ. ರಮಲ್ ಎಂದರೆ ಸಣ್ಣ ಸಣ್ಣ ಹೆಜ್ಜೆಗಳೊಂದಿಗೆ ವೇಗವಾಗಿ ನಡೆಯುವುದು. ಉಳಿದ ನಾಲ್ಕು ಸುತ್ತುಗಳಲ್ಲಿ ರಮಲ್ ಇಲ್ಲ. ಸಾಮಾನ್ಯವಾಗಿ ನಡೆಯುವಂತೆ ನಡೆಯಬೇಕು.

ತವಾಫ್ ಮುಗಿದ ನಂತರ, ಮಕಾಮ್ ಇಬ್ರಾಹೀಮ್ (ಇಬ್ರಾಹೀಮ್(ಅ) ನಿಂತ ಸ್ಥಳ) ಕಡೆಗೆ ಹೋಗಿ ಇದನ್ನು ಪಠಿಸಬೇಕು: "ವತ್ತಖಿದೂ ಮಿಂ ಮಕಾಮಿ ಇಬ್ರಾಹೀಮ ಮುಸಲ್ಲಾ" (ಮತ್ತು ಇಬ್ರಾಹೀಮ್ ನಿಂತ ಸ್ಥಳವನ್ನು ನಮಾಝ್ ಮಾಡುವ ಸ್ಥಳವಾಗಿ ಮಾಡಿ).

ನಂತರ ಸಾಧ್ಯವಾದರೆ ಅದರ ಹಿಂದೆ ಎರಡು ರಕ್‌ಅತ್ ನಮಾಝ್ ಮಾಡಬೇಕು. ಸಾಧ್ಯವಾಗದಿದ್ದರೆ ಮಸೀದಿಯ ಯಾವುದೇ ಸ್ಥಳದಲ್ಲಿ ಮಾಡಬಹುದು. ಮೊದಲ ರಕ್‌ಅತ್‌ನಲ್ಲಿ ಸೂರ ಫಾತಿಹಾದ ನಂತರ "ಕುಲ್ ಯಾ ಅಯ್ಯುಹಲ್ ಕಾಫಿರೂನ್" ಮತ್ತು ಎರಡನೇ ರಕ್‌ಅತ್‌ನಲ್ಲಿ ಸೂರ ಫಾತಿಹಾದ ನಂತರ "ಕುಲ್ ಹುವಲ್ಲಾಹು ಅಹದ್" ಪಠಿಸಬೇಕು.

﴿...وَٱتَّخِذُواْ مِن مَّقَامِ إِبۡرَٰهِـۧمَ مُصَلّٗى...﴾،

"...ಇಬ್ರಾಹೀಮರು ನಿಂತ ಸ್ಥಳವನ್ನು ನಮಾಝ್‌ನ ಸ್ಥಳವಾಗಿ ಮಾಡಿಕೊಳ್ಳಿರಿ..." [ಅಲ್-ಬಖರ:125]. ನಂತರ ಸಾಧ್ಯವಾದರೆ ಅದರ ಹಿಂದೆ ಎರಡು ರಕ್‌ಅತ್ ನಮಾಝ್ ಮಾಡಬೇಕು. ಸಾಧ್ಯವಾಗದಿದ್ದರೆ ಮಸೀದಿಯ ಯಾವುದೇ ಸ್ಥಳದಲ್ಲಿ ಮಾಡಬಹುದು. ಮೊದಲ ರಕ್‌ಅತ್‌ನಲ್ಲಿ ಸೂರ ಫಾತಿಹಾದ ನಂತರ:

﴿قُلۡ يَٰٓأَيُّهَا ٱلۡكَٰفِرُونَ﴾

"ಕುಲ್ ಯಾ ಅಯ್ಯುಹಲ್ ಕಾಫಿರೂನ್" [ಸೂರಾ ಅಲ್-ಕಾಫಿರೂನ್: 1] ಮತ್ತು ಎರಡನೇ ರಕ್‌ಅತ್‌ನಲ್ಲಿ ಸೂರ ಫಾತಿಹಾದ ನಂತರ:

﴿قُلۡ هُوَ ٱللَّهُ أَحَدٌ﴾.

"ಕುಲ್ ಹುವಲ್ಲಾಹು ಅಹದ್" ಪಠಿಸಬೇಕು. [ಸೂರಾ ಅಲ್-ಇಖ್ಲಾಸ್:1]

## ಆರನೆಯದಾಗಿ: ಸಈ ಮಾಡುವ ವಿಧಾನ

ತವಾಫ್ ಮತ್ತು ಎರಡು ರಕ್‌ಅತ್ ನಮಾಝ್ ನಿರ್ವಹಿಸದ ಬಳಿಕ, ಮಸ್‌ಆ (ಸಈ ಮಾಡುವ ಸ್ಥಳ) ಕ್ಕೆ

ಹೋಗಬೇಕು. ಸಫಾ ಬೆಟ್ಟವನ್ನು ಸಮೀಪಿಸಿದಾಗ, ಇದನ್ನು ಪಠಿಸಬೇಕು: "ಇನ್ನ ಸ್ಸಫಾ ವಲ್ ಮರ್ವತ ಮಿಂ ಶಆಇರಿಲ್ಲಾಹ್" (ಖಂಡಿತವಾಗಿಯೂ ಸಫಾ ಮತ್ತು ಮರ್ವಾ ಅಲ್ಲಾಹನ ಸಂಕೇತಗಳಲ್ಲಿ ಸೇರಿವೆ). ನಂತರ ಹೀಗೆ ಹೇಳಬೇಕು: "ಅಬ್ದಉ ಬಿಮಾ ಬದಅಲ್ಲಾಹು ಬಿಹೀ" (ಅಲ್ಲಾಹು ಪ್ರಾರಂಭಿಸಿದ್ದಲ್ಲಿಂದ ನಾನು ಪ್ರಾರಂಭಿಸುತ್ತೇನೆ).

﴿إِنَّ ٱلصَّفَا وَٱلۡمَرۡوَةَ مِن شَعَآئِرِ ٱللَّهِ...﴾

"ಇನ್ನಸ್ಸಫಾ ವಲ್ ಮರ್ವತ ಮಿನ್ ಶಆಇರಿಲ್ಲಾಹ್" (ಖಂಡಿತವಾಗಿಯೂ ಸಫಾ ಮತ್ತು ಮರ್ವಾ ಅಲ್ಲಾಹುವಿನ ಚಿಹ್ನೆಗಳಲ್ಲಿ ಸೇರಿವೆ." ನಂತರ ಹೀಗೆ ಪಠಿಸಬೇಕು:

«أَبْدَأُ بِمَا بَدَأَ اللهُ بِهِ».

"ಅಲ್ಲಾಹು ಆರಂಭಿಸಿದಲ್ಲಿಂದಲೇ ನಾನು ಆರಂಭಿಸುತ್ತೇನೆ."[1]

ನಂತರ ಕಅಬಾವನ್ನು ಅಥವಾ ಅದರ ದಿಕ್ಕನ್ನು ನೋಡುವವರೆಗೆ ಸಫಾ ಬೆಟ್ಟವನ್ನು ಹತ್ತಿ ಕಅಬಾದ ಕಡೆಗೆ ಮುಖ ಮಾಡಬೇಕು. ಅಲ್ಲಿ ಅಲ್ಲಾಹನ ಏಕದೇವತ್ವವನ್ನು ಮತ್ತು ಮಹಾನತೆಯನ್ನು ಘೋಷಿಸುತ್ತಾ ಹೀಗೆ ಹೇಳಬೇಕು: "ಲಾ ಇಲಾಹ ಇಲ್ಲಲ್ಲಾಹು ವಹ್ದಹು ಲಾ ಶರೀಕ ಲಹು, ಲಹುಲ್ ಮುಲ್ಕು ವ ಲಹುಲ್ ಹಮ್ದ್, ವ ಹುವ ಅಲ ಕುಲ್ಲಿ ಶೈಇನ್ ಕದೀರ್. ಲಾ ಇಲಾಹ ಇಲ್ಲಲ್ಲಾಹು ವಹ್ದಹು,

[1] ಮುಸ್ಲಿಮ್, ಸಂಖ್ಯೆ (1218).

ಅಂಜಝ ವಅದಹು, ವ ನಸರ ಅಬ್ದಹು, ವ ಹಝುಮಲ್ ಅಹ್‌ಝಾಬ ವಹ್ದಹು" (ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಬೇರೆ ಆರಾಧ್ಯನಿಲ್ಲ, ಅವನು ಏಕೈಕನು, ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಆಧಿಪತ್ಯ ಮತ್ತು ಸ್ತುತಿಗಳು ಅವನಿಗೆ ಸೇರಿದ್ದು. ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ. ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಬೇರೆ ಆರಾಧ್ಯನಿಲ್ಲ, ಅವನು ಏಕೈಕನು, ಅವನು ತನ್ನ ವಾಗ್ದಾನವನ್ನು ನೆರವೇರಿಸಿದನು, ತನ್ನ ದಾಸನಿಗೆ ಸಹಾಯ ಮಾಡಿದನು ಮತ್ತು ಒಂಟಿಯಾಗಿ ಸೈನ್ಯಗಳನ್ನು ಸೋಲಿಸಿದನು). ಇದನ್ನು ಮೂರು ಬಾರಿ ಪುನರಾವರ್ತಿಸಬೇಕು. ಇವುಗಳ ನಡುವೆ ಬೇರೆ ಪ್ರಾರ್ಥನೆಗಳನ್ನು ಪ್ರಾರ್ಥಿಸಬಹುದು.[1]

«لَا إِلَهَ إِلَّا اللهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ، لَا إِلَهَ إِلَّا اللهُ وَحْدَهُ، أَنْجَزَ وَعْدَهُ، وَنَصَرَ عَبْدَهُ، وَهَزَمَ الْأَحْزَابَ وَحْدَهُ»، ثُمَّ دَعَا بَيْنَ ذَلِكَ. قَالَ مِثْلَ هَذَا ثَلَاثَ مَرَّاتٍ.

"ಲಾ ಇಲಾಹ ಇಲ್ಲಲ್ಲಾಹು ವಹ್ದಹು ಲಾ ಶರೀಕ ಲಹು, ಲಹುಲ್ ಮುಲ್ಕು ವ ಲಹುಲ್ ಹಮ್ದ್, ವ ಹುವ ಅಲ ಕುಲ್ಲಿ ಶೈಇನ್ ಕದೀರ್. ಲಾ ಇಲಾಹ ಇಲ್ಲಲ್ಲಾಹು ವಹ್ದಹು, ಅಂಜಝ ವಅದಹು, ವ ನಸರ ಅಬ್ದಹು, ವ ಹಝುಮಲ್ ಅಹ್‌ಝಾಬ ವಹ್ದಹು" (ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಬೇರೆ ಆರಾಧ್ಯನಿಲ್ಲ, ಅವನು ಏಕೈಕನು, ಅವನಿಗೆ

---

[1] ಮುಸ್ಲಿಮ್, ಸಂಖ್ಯೆ (1218).

ಯಾವುದೇ ಸಹಭಾಗಿಗಳಿಲ್ಲ. ಆಧಿಪತ್ಯ ಮತ್ತು ಸ್ತುತಿಗಳು ಅವನಿಗೆ ಸೇರಿದ್ದು. ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ. ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಬೇರೆ ಆರಾಧ್ಯನಿಲ್ಲ, ಅವನು ಏಕೈಕನು, ಅವನು ತನ್ನ ವಾಗ್ದಾನವನ್ನು ನೆರವೇರಿಸಿದನು, ತನ್ನ ದಾಸನಿಗೆ ಸಹಾಯ ಮಾಡಿದನು ಮತ್ತು ಒಂಟಿಯಾಗಿ ಸೈನ್ಯಗಳನ್ನು ಸೋಲಿಸಿದನು). ಇದನ್ನು ಮೂರು ಬಾರಿ ಪುನರಾವರ್ತಿಸಬೇಕು. ಇವುಗಳ ನಡುವೆ ಬೇರೆ ಪ್ರಾರ್ಥನೆಗಳನ್ನು ಪ್ರಾರ್ಥಿಸಬಹುದು.

ನಂತರ ಸಫಾದಿಂದ ಇಳಿದು ಮರ್ವಾಕ್ಕೆ ನಡೆದುಕೊಂಡು ಹೋಗಬೇಕು. ಹಸಿರು ಗುರುತನ್ನು ತಲುಪಿದರೆ, ಎರಡನೇ ಹಸಿರು ಗುರುತನ್ನು ತಲುಪುವವರೆಗೆ ವೇಗವಾಗಿ ಓಡಬೇಕು. ನಂತರ ಎಂದಿನಂತೆ ನಡೆಯಬೇಕು. ವೇಗವಾಗಿ ಓಡುವುದು ಮಹಿಳೆಯರಿಗೆ ನಿಯಮ ಮಾಡಲಾಗಿಲ್ಲ.

ಮರ್ವಾಕ್ಕೆ ತಲುಪಿದಾಗ, ಸಫಾದಲ್ಲಿ ಮಾಡಿದ್ದನ್ನೇ ಮಾಡುವುದು ನಿಯಮವಾಗಿದೆ (ನೋಡಿ ಪ್ಯಾರಾ 2).

ನಂತರ ಮರ್ವಾದಿಂದ ಇಳಿದು ಸಫಾಕ್ಕೆ ನಡೆದುಕೊಂಡು ಹೋಗಬೇಕು. ಹಸಿರು ಗುರುತನ್ನು ತಲುಪಿದರೆ, ಎರಡನೇ ಹಸಿರು ಗುರುತನ್ನು ತಲುಪುವವರೆಗೆ ವೇಗವಾಗಿ ಓಡಬೇಕು. ನಂತರ ಎಂದಿನಂತೆ ನಡೆಯಬೇಕು.

ಹೀಗೆ ಏಳು ಸುತ್ತುಗಳನ್ನು ಪೂರ್ಣಗೊಳಿಸಬೇಕು. ಸಫಾದಿಂದ ಮರ್ವಾಕ್ಕೆ ಹೋಗುವುದು ಒಂದು ಸುತ್ತು,

ಮತ್ತು ಮರ್ವಾದಿಂದ ಸಫಾಕ್ಕೆ ಹಿಂತಿರುಗುವುದು ಇನ್ನೊಂದು ಸುತ್ತು.

ಸಈ ಮಾಡುವಾಗ ತನಗೆ ಇಷ್ಟವಾದ ಯಾವುದೇ ಝಿಕ್ರ್, ದುಆ ಮತ್ತು ಕುರ್‌ಆನ್ ಪಠಣವನ್ನು ಮಾಡಬಹುದು.

ಏಳನೆಯದಾಗಿ: ತಲೆ ಬೋಳಿಸುವ ಮತ್ತು ಕೂದಲು ಕತ್ತರಿಸುವ ವಿಧಾನ

ಉಮ್ರಾ ಮಾಡುವುದು ಪುರುಷನಾಗಿದ್ದರೆ, ತವಾಫ್ ಮತ್ತು ಸಈ ಮುಗಿಸಿದ ನಂತರ, ತನ್ನ ತಲೆಯನ್ನು ಬೋಳಿಸಿಕೊಳ್ಳುವುದು ಅಥವಾ ಕೂದಲನ್ನು ಕತ್ತರಿಸುವುದು ಕಡ್ಡಾಯವಾಗಿದೆ. ತಲೆ ಬೋಳಿಸುವುದಾರೆ ಅಥವಾ ಕೂದಲು ಕತ್ತರಿಸುವುದಾದರೆ ಅದು ಸಂಪೂರ್ಣ ತಲೆಯನ್ನು ಒಳಗೊಂಡಿರುವುದು ಸುನ್ನತ್ ಆಗಿದೆ.

ಕೂದಲು ಕತ್ತರಿಸುವುದಕ್ಕಿಂತ ತಲೆ ಬೋಳಿಸುವುದು ಉತ್ತಮ. ಆದರೆ ಹಜ್ಜ್‌ನ ಸಮಯವು ಹತ್ತಿರದಲ್ಲಿದ್ದು, ತಲೆಗೂದಲು ಬೆಳೆಯಲು ಸಮಯವಿಲ್ಲದಿದ್ದರೆ, ಕೂದಲು ಕತ್ತರಿಸುವುದೇ ಶ್ರೇಷ್ಠ.

ಮಹಿಳೆಯು ತನ್ನ ಕೂದಲಿನ ತುದಿಗಳಿಂದ ಒಂದು ಬೆರಳಿನಷ್ಟು ಉದ್ದವನ್ನು ಕತ್ತರಿಸಬೇಕು.

ಆದರೆ, ಇಫ್ರಾದ್ ಅಥವಾ ಕಿರಾನ್ ವಿಧದ ಮೂಲಕ ಹಜ್ಜ್‌ಗಾಗಿ ಇಹ್ರಾಮ್‌ಗೆ ಪ್ರವೇಶಿಸಿದವರು ಈದ್ ದಿನದಂದು ಜಮ್ರತುಲ್ ಅಕಬಕ್ಕೆ ಕಲ್ಲು ಎಸೆದ ನಂತರವೇ ಕೂದಲನ್ನು ಕತ್ತರಿಸಬೇಕು.

ಇದರೊಂದಿಗೆ ಉಮ್ರಾ ಮಾಡುವವರ ಉಮ್ರಾ ಪೂರ್ಣವಾಗುತ್ತದೆ. ಅದೇ ರೀತಿ, ತಮತ್ತುಅ ವಿಧದಲ್ಲಿ ಹಜ್ಜ್ ನಿರ್ವಹಿಸುವವರು ಇದರೊಂದಿಗೆ ತಮ್ಮ ಉಮ್ರಾ ಕರ್ಮವನ್ನು ಪೂರ್ಣಗೊಳಿಸುತ್ತಾರೆ.

## ಹಜ್ಜ್ ನಿರ್ವಹಿಸುವ ವಿಧಾನ

### ಮೊದಲನೆಯದಾಗಿ: ಹಜ್ಜ್‌ಗಾಗಿ ಇಹ್ರಾಮ್‌ಗೆ ಪ್ರವೇಶಿಸುವುದು:

ಹಜ್ ಮಾಡಲು ಬಯಸುವವರು ಝುಲ್ ಹಿಜ್ಜಾ ತಿಂಗಳ ಎಂಟನೇ ದಿನವಾದ ತರ್ವಿಯಾ ದಿನದಂದು ಬೆಳಿಗ್ಗೆ ತಾವು ಹಜ್ಜ್ ಮಾಡಲು ಉದ್ದೇಶಿಸಿರುವ ಸ್ಥಳದಿಂದ ಇಹ್ರಾಮ್‌ಗೆ ಪ್ರವೇಶಿಸುವುದು ಸುನ್ನತ್ ಆಗಿದೆ. ಇದು ಅವರು ಮಕ್ಕಾದಲ್ಲಿ ಅಥವಾ ಮೀಖಾತ್ ಸ್ಥಳಗಳ ಒಳಗೆ ಇದ್ದರೆ ಮಾತ್ರ. ಇಲ್ಲದಿದ್ದರೆ ಅವರು ತಮ್ಮ ದಾರಿಯಲ್ಲಿರುವ ಮೀಖಾತ್‌ನ ಸ್ಥಳದಿಂದ ಹಜ್ಜ್‌ಗಾಗಿ ಇಹ್ರಾಮ್ ಪ್ರವೇಶಿಸಬೇಕು.

ಹಜ್ಜ್‌ಗಾಗಿ ಇಹ್ರಾಮ್‌ಗೆ ಪ್ರವೇಶಿಸುವಾಗ, ಉಮ್ರಾಕ್ಕಾಗಿ ಇಹ್ರಾಮ್‌ಗೆ ಪ್ರವೇಶಿಸುವಾಗ ಮಾಡಿದಂತೆಯೇ ಮಾಡಬೇಕು. ಅಂದರೆ, ಸ್ನಾನ ಮಾಡುವುದು, ಸುಗಂಧ ದ್ರವ್ಯವನ್ನು ಹಚ್ಚುವುದು ಮತ್ತು ನಮಾಝ್ ಮಾಡುವುದು. ನಂತರ ಹಜ್ಜ್‌ಗಾಗಿ ಇಹ್ರಾಮ್‌ನ ನಿಯ್ಯತ್ (ಉದ್ದೇಶ) ಮಾಡಬೇಕು ಮತ್ತು ತಲ್ಬಿಯಾ ಹೇಳಬೇಕು. ಹಜ್ಜ್‌ನಲ್ಲಿ ತಲ್ಬಿಯಾ ಹೇಳುವ ವಿಧಾನವು ಉಮ್ರಾದಲ್ಲಿ ತಲ್ಬಿಯಾ ಹೇಳುವ ವಿಧಾನದಂತೆಯೇ ಇದೆ. ಆದರೆ ಇಲ್ಲಿ "ಲಬ್ಬೈಕ

ಉಮ್ರತನ್" ಎಂದು ಹೇಳುವುದಕ್ಕೆ ಬದಲಾಗಿ "ಲಬ್ಬೈಕ ಹಜ್ಜನ್" (ಓ ಅಲ್ಲಾಹ್, ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ, ಹಜ್ಜ್‌ಗಾಗಿ) ಎಂದು ಹೇಳಬೇಕು.

ತನ್ನ ಹಜ್ಜ್ ಕರ್ಮಗಳನ್ನು ಪೂರ್ಣಗೊಳಿಸುವುದಕ್ಕೆ ಏನಾದರೂ ಅಡ್ಡಿಯಾಗಬಹುದೆಂಬ ಭಯವಿದ್ದರೆ, ಇಹ್ರಾಮ್‌ಗೆ ಪ್ರವೇಶಿಸುವಾಗ ಷರತ್ತು ವಿಧಿಸಿ ಹೀಗೆ ಹೇಳಬಹುದು: "...ವ ಇನ್ ಹಬಸನೀ ಹಾಬಿಸುನ್ ಫಮಹಲ್ಲೀ ಹೈಸು ಹಬಸ್ತನೀ" (ಮತ್ತು ಯಾವುದಾದರೂ ಅಡ್ಡಿಯು ನನ್ನನ್ನು ತಡೆದರೆ, ನೀನು ನನ್ನನ್ನು ತಡೆದ ಸ್ಥಳವೇ ನನ್ನ ಇಹ್ರಾಮ್‌ನಿಂದ ಹೊರಬರುವ ಸ್ಥಳ). ಈ ಷರತ್ತು ವಿಧಿಸಿದವರಿಗೆ ಹಜ್ಜ್ ಕರ್ಮಗಳನ್ನು ಪೂರ್ಣಗೊಳಿಸುವುದಕ್ಕೆ ಏನಾದರೂ ಅಡ್ಡಿಯುಂಟಾದರೆ, ಅವನು ಇಹ್ರಾಮ್‌ನಿಂದ ಹೊರಬರಬಹುದು. ಅವರು ಏನೂ ಪ್ರಾಯಶ್ಚಿತ್ತವಾಗಿ ಕೊಡಬೇಕಾಗಿಲ್ಲ.

ನಂತರ ಹೆಚ್ಚು ಹೆಚ್ಚು ತಲ್ಬಿಯಾ ಹೇಳುವುದು: "ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್, ಇನ್ನಲ್ ಹಮ್ದ ವನ್ನಿಅಮತ ಲಕ ವಲ್ ಮುಲ್ಕ್ ಲಾ ಶರೀಕ ಲಕ್". ಪುರುಷರು ಧ್ವನಿಯನ್ನು ಎತ್ತಿ ಹೇಳಬೇಕು. ಹತ್ತಿರದಲ್ಲಿ ಪರ ಪುರುಷರು ಇಲ್ಲದಿದ್ದರೆ ಮಹಿಳೆಯೂ ಸಹ ಧ್ವನಿಯನ್ನು ಎತ್ತಿ ಹೇಳಬೇಕು. ಇಹ್ರಾಮ್‌ನಲ್ಲಿರುವವರು ತಲ್ಬಿಯಾವನ್ನು ಹೆಚ್ಚು ಹೆಚ್ಚಾಗಿ ಹೇಳಬೇಕು. ವಿಶೇಷವಾಗಿ ಪರಿಸ್ಥಿತಿಗಳು

ಮತ್ತು ಸಮಯಗಳು ಬದಲಾಗುವಾಗ. ಉದಾಹರಣೆಗೆ ಎತ್ತರವಾದ ಸ್ಥಳಕ್ಕೆ ಏರಿದಾಗ ಅಥವಾ ತಗ್ಗು ಪ್ರದೇಶಕ್ಕೆ ಇಳಿದಾಗ ಅಥವಾ ರಾತ್ರಿ ಅಥವಾ ಹಗಲು ಬಂದಾಗ.

ಇಹ್ರಾಮ್‌ನಿಂದ ಈದ್ ದಿನದಂದು ಜಮ್ರತುಲ್ ಅಖಬಕ್ಕೆ ಕಲ್ಲು ಎಸೆಯಲು ಪ್ರಾರಂಭಿಸುವವರೆಗೆ ತಲ್ಬಿಯ ಹೇಳುವುದು ನಿಯಮವಾಗಿದೆ.

ಇಹ್ರಾಮ್‌ನಲ್ಲಿರುವವರು ಇಹ್ರಾಮ್‌ನಿಂದ ಹೊರಬರುವವರೆಗೆ ಇಹ್ರಾಮ್‌ನ ನಿಷಿದ್ಧ ಕಾರ್ಯಗಳಲ್ಲಿ ಯಾವುದೂ ಸಂಭವಿಸದಂತೆ ಎಚ್ಚರಿಕೆ ವಹಿಸುವುದು ಕಡ್ಡಾಯವಾಗಿದೆ.

***

## ಎರಡನೆಯದಾಗಿ: ಮಿನಾದಲ್ಲಿ ರಾತ್ರಿ ಕಳೆಯುವುದು:

ನಂತರ ಎಂಟನೇ ದಿನದಂದು ಮಿನಾಕ್ಕೆ ಹೋಗುವುದು ಸುನ್ನತ್ ಆಗಿದೆ. ಅಲ್ಲಿ ಝುಹ್ರ್, ಅಸ್ರ್, ಮಗ್ರಿಬ್, ಇಶಾ ಮತ್ತು ಫಜ್ರ್ ನಮಾಝ್‌ಗಳನ್ನು ಕಸ್ರ್ (ಕುಗ್ಗಿಸಿ) ಮಾಡಿ ನಿರ್ವಹಿಸಬೇಕು. ಆದರೆ ಜಮಅ (ಸೇರಿಸುವುದು) ಮಾಡಬಾರದು. ಏಕೆಂದರೆ ಪ್ರವಾದಿ (ಸ) ರವರು ಮಿನಾದಲ್ಲಿ ಕಸ್ರ್ ಮಾಡುತ್ತಿದ್ದರು, ಆದರೆ ಜಮಅ ಮಾಡುತ್ತಿರಲಿಲ್ಲ.

## ಮೂರನೆಯದಾಗಿ: ಅರಫಾದಲ್ಲಿ ನಿಲ್ಲುವುದು ಮತ್ತು ಮುಝ್ದಲಿಫಾದಲ್ಲಿ ರಾತ್ರಿ ಕಳೆಯುವುದು:

ಒಂಬತ್ತನೇ ದಿನವಾದ ಅರಫಾ ದಿನದಂದು ಸೂರ್ಯೋದಯವಾದರೆ, ಮಿನಾದಿಂದ ಅರಫಾಕ್ಕೆ ಹೋಗಬೇಕು. ಸಾಧ್ಯವಾದರೆ ಝುವಾಲ್ (ಮಧ್ಯಾಹ್ನ) ವರೆಗೆ ನಮಿರಾದಲ್ಲಿ ತಂಗಬೇಕು. ಸಾಧ್ಯವಾಗದಿದ್ದರೆ ಅದರಲ್ಲಿ ಯಾವುದೇ ತೊಂದರೆ ಇಲ್ಲ. ಏಕೆಂದರೆ ನಮಿರಾದಲ್ಲಿ ತಂಗುವುದು ಸುನ್ನತ್ ಆಗಿದೆ.

ಸೂರ್ಯನು ಮಧ್ಯಾಹ್ನದಿಂದ ಸರಿದರೆ, ಝುಹ್ರ್ ಮತ್ತು ಅಸ್ರ್ ನಮಾಝ್‌ಗಳನ್ನು ಎರಡು ರಕ್‌ಅತ್‌ಗಳಂತೆ ನಿರ್ವಹಿಸಬೇಕು. ಪ್ರವಾದಿ (ಸ) ರವರು ಮಾಡಿದಂತೆ ಜಮ್‌ಅ ತಕ್ದೀಮ್ (ಮೊದಲ ನಮಾಝಿನ ಸಮಯದಲ್ಲಿ ಎರಡನ್ನೂ ಸೇರಿಸಿ ನಿರ್ವಹಿಸುವುದು) ಮಾಡಬೇಕು.

ನಮಾಝ್ ನಿರ್ವಹಿಸಿದ ನಂತರ ಅಲ್ಲಾಹನ ಧ್ಯಾನ (ಸ್ಮರಣೆ), ದುಆ (ಪ್ರಾರ್ಥನೆ) ಮತ್ತು ವಿನಮ್ರತೆಯಲ್ಲಿ ಸಮಯವನ್ನು ಕಳೆಯಬೇಕು. ಕೈಗಳನ್ನು ಎತ್ತಿ ಕಿಬ್ಲಾದ ಕಡೆಗೆ ಮುಖ ಮಾಡಿ ಇಷ್ಟವಾದ ಪ್ರಾರ್ಥನೆಗಳನ್ನು ಪ್ರಾರ್ಥಿಸಬೇಕು.

ಆ ಶ್ರೇಷ್ಠ ಸ್ಥಳದಲ್ಲಿ ಪ್ರವಾದಿ (ಸ) ಅವರು ಹೆಚ್ಚಾಗಿ ಪ್ರಾರ್ಥಿಸುತ್ತಿದ್ದ ಪ್ರಾರ್ಥನೆ ಹೀಗಿತ್ತು: "ಲಾ ಇಲಾಹ ಇಲ್ಲಲ್ಲಾಹು ವಹ್ದಹು ಲಾ ಶರೀಕ ಲಹು, ಲಹುಲ್ ಮುಲ್ಕು ವ ಲಹುಲ್ ಹಮ್ದ್ ವ ಹುವ ಅಲಾ ಕುಲ್ಲಿ ಶೈಇನ್ ಕದೀರ್" (ಅಲ್ಲಾಹನ ಹೊರತು ಆರಾಧನೆಗೆ

ಅರ್ಹನಾದ ಬೇರೆ ಆರಾಧ್ಯನಿಲ್ಲ, ಅವನು ಏಕೈಕನು, ಅವನಿಗೆ ಯಾವುದೇ ಸಹಭಾಗಿಗಳಿಲ್ಲ, ಆಧಿಪತ್ಯ ಮತ್ತು ಸ್ತುತಿ ಅವನಿಗೆ ಸೇರಿದ್ದು. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು).

ಆಯಾಸವಾದರೆ ಮತ್ತು ಸ್ನೇಹಿತರೊಂದಿಗೆ ಪ್ರಯೋಜನಕಾರಿ ಮಾತುಗಳನ್ನಾಡಲು ಅಥವಾ ಅಲ್ಲಾಹನ ಕರುಣೆ ಮತ್ತು ಅವನ ಅಪಾರ ಕೊಡುಗೆಗಳಿಗೆ ಸಂಬಂಧಿಸಿದ ಉಪಯುಕ್ತ ಪುಸ್ತಕಗಳನ್ನು ಓದುವ ಮೂಲಕ ವಿಶ್ರಾಂತಿ ಪಡೆಯಲು ಬಯಸುವುದಾದರೆ, ಮತ್ತು ಹಾಗೆ ಮಾಡುವುದರಿಂದ ಆ ದಿನದಲ್ಲಿರುವ ನಿರೀಕ್ಷೆಯು ಬಲವಾಗುವುದಾದರೆ, ಅದು ಒಳ್ಳೆಯದೇ ಆಗಿದೆ. ನಂತರ ಪುನಃ ಅಲ್ಲಾಹನಿಗೆ ವಿನಮ್ರತೆ ತೋರಲು ಮತ್ತು ಅವನಲ್ಲಿ ಪ್ರಾರ್ಥಿಸಲು ಮರಳಬೇಕು. ಆ ದಿನದ ಕೊನೆಯ ಭಾಗವನ್ನು ಪ್ರಾರ್ಥನೆಯಲ್ಲಿ ಕಳೆಯಲು ಪ್ರಯತ್ನಿಸಬೇಕು. ಏಕೆಂದರೆ ಅರಫಾ ದಿನದ ಪ್ರಾರ್ಥನೆ ಅತಿಶ್ರೇಷ್ಠ ಪ್ರಾರ್ಥನೆಯಾಗಿದೆ.

ಅರಫಾ ದಿನದಂದು ಸೂರ್ಯಾಸ್ತವಾದರೆ ಮುಝ್ದಲಿಫಾಕ್ಕೆ ತೆರಳಬೇಕು.

ಅಲ್ಲಿಗೆ ತಲುಪಿದರೆ, ಮಗ್ರಿಬ್ ನಮಾಝನ್ನು ಮೂರು ರಕ್ಅತ್ ಮತ್ತು ಇಶಾ ನಮಾಝನ್ನು ಎರಡು ರಕ್ಅತ್ ಆಗಿ ಜಮಅ (ಸೇರಿಸಿ) ಮಾಡಬೇಕು.

ಅರ್ಧರಾತ್ರಿಯ ನಂತರವೇ ಮುಝ್ದಲಿಫಾಕ್ಕೆ ತಲುಪುವ ಭಯವಿದ್ದರೆ, ಮುಝ್ದಲಿಫಾಕ್ಕೆ ತಲುಪುವ ಮೊದಲೇ ನಮಾಝ್ ನಿರ್ವಹಿಸಬೇಕು.

ಅರ್ಧರಾತ್ರಿಯ ನಂತರಕ್ಕೆ ನಮಾಝನ್ನು ವಿಳಂಬ ಮಾಡಲು ಅನುಮತಿ ಇಲ್ಲ.

ಮುಝ್ದಲಿಫಾದಲ್ಲಿ ರಾತ್ರಿಯನ್ನು ಕಳೆಯಬೇಕು. ಫಜ್ರ್‌ನ ಸಮಯವಾಗಿದೆಯೆಂದು ಸ್ಪಷ್ಟವಾದರೆ, ಅಧಾನ್ ಮತ್ತು ಇಕಾಮತ್‌ನೊಂದಿಗೆ ಬೇಗನೇ ಫಜ್ರ್ ನಮಾಝ್ ನಿರ್ವಹಿಸಬೇಕು.

ನಂತರ ಮಶ್‌ಅರುಲ್-ಹರಾಮ್‌ಗೆ ಹೋಗಿ, ಬೆಳಗಾಗುವ ತನಕ ಅಲ್ಲಿ ಅಲ್ಲಾಹನ ಏಕತ್ವವನ್ನು ಘೋಷಿಸಬೇಕು, ಅವನನ್ನು ಸ್ತುತಿಸಬೇಕು ಮತ್ತು ಇಷ್ಟವಾದ ಪ್ರಾರ್ಥನೆಗಳನ್ನು ಪ್ರಾರ್ಥಿಸಬೇಕು. ಮಶ್‌ಅರುಲ್-ಹರಾಮ್‌ಗೆ ಹೋಗಲು ಸಾಧ್ಯವಾಗದಿದ್ದರೆ, ತಾನಿರುವ ಸ್ಥಳದಲ್ಲೇ ಪ್ರಾರ್ಥಿಸಬಹುದು. ಏಕೆಂದರೆ ಪ್ರವಾದಿ (ಸ) ರವರು ಹೇಳಿದರು: "ನಾನು ಇಲ್ಲಿ ನಿಂತಿದ್ದೇನೆ, ಮತ್ತು ಇಡೀ ಜಮ್‌ಅ (ಮುಝ್ದಲಿಫ) ನಿಲ್ಲುವ ಸ್ಥಳವಾಗಿದೆ." ಝಿಕ್ರ್ ಮತ್ತು ದುಆ ಮಾಡುವಾಗ ಕಿಬ್ಲಾದ ಕಡೆಗೆ ಮುಖ ಮಾಡಿ ಕೈಗಳನ್ನು ಎತ್ತಿಕೊಂಡಿರಬೇಕು.

«وَقَفْتُ هَاهُنَا وَجَمْعٌ كُلُّهَا مَوْقِفٌ»،

"ನಾನು ಇಲ್ಲಿ ನಿಂತಿದ್ದೇನೆ ಮತ್ತು 'ಜಮ್‌ಅ' (ಮುಜ್ದಲಿಫಾದ ಇನ್ನೊಂದು ಹೆಸರು) ಎಲ್ಲವೂ ನಿಲ್ಲುವ ಸ್ಥಳವಾಗಿದೆ", ಪ್ರಾರ್ಥನೆ ಮತ್ತು ಸ್ಮರಣೆಯ (ದಿಕ್ರ್) ಸಮಯದಲ್ಲಿ, ಕಿಬ್ಲಾವನ್ನು ಅಭಿಮುಖೀಕರಿಸಬೇಕು ಮತ್ತು ಕೈಗಳನ್ನು ಎತ್ತಬೇಕು.

## ನಾಲ್ಕನೆಯದಾಗಿ: ಈದ್ ದಿನದ ಕರ್ಮಗಳು

ಬೆಳಗಾದೊಡನೆ - ಸೂರ್ಯೋದಯಕ್ಕೆ ಮೊದಲು - ಮುಝ್ದಲಿಫಾದಿಂದ ಮಿನಾಕ್ಕೆ ಹೋಗಬೇಕು ಮತ್ತು ವಾದಿ ಮುಹಸ್ಸಿರ್‌ನಲ್ಲಿ ವೇಗವಾಗಿ ನಡೆಯಬೇಕು.

ಮಿನಾವನ್ನು ತಲುಪಿದರೆ, ಜಮ್ರತುಲ್-ಅಖಬಕ್ಕೆ ಕಲ್ಲು ಎಸೆಯಬೇಕು. ಇದು ಮಕ್ಕಾಗೆ ಹತ್ತಿರವಿರುವ ಕೊನೆಯ ಜಮ್ರಾ. ಒಂದರ ನಂತರ ಒಂದರಂತೆ ಏಳು ಸಣ್ಣ ಕಲ್ಲುಗಳನ್ನು ಎಸೆಯಬೇಕು. ಪ್ರತಿಯೊಂದು ಕಲ್ಲು ಸುಮಾರು ಖರ್ಜೂರದ ಬೀಜದ ಗಾತ್ರದಲ್ಲಿರತಕ್ಕದ್ದು. ಪ್ರತಿ ಕಲ್ಲನ್ನು ಎಸೆಯುವಾಗ ಅಲ್ಲಾಹು ಅಕ್ಬರ್ ಎಂದು ಹೇಳಬೇಕು.

ನಂತರ ಸಾಧ್ಯವಾದರೆ ತನ್ನ ಹದಿಯನ್ನು (ಕುರ್ಬಾನಿ ಪ್ರಾಣಿ) ಬಲಿಕೊಡಬೇಕು.

ನಂತರ, ಪುರುಷನಾಗಿದ್ದರೆ ತಲೆಯನ್ನು ಬೋಳಿಸಿಕೊಳ್ಳಬೇಕು ಅಥವಾ ಕೂದಲನ್ನು ಕತ್ತರಿಸಬೇಕು. ತಲೆ ಬೋಳಿಸುವುದು ಉತ್ತಮ. ಮಹಿಳೆಯು ತಲೆ ಬೋಳಿಸಬಾರದು. ಬದಲಿಗೆ ಕೂದಲು ಕತ್ತರಿಸುವುದು ನಿಯಮವಾಗಿದೆ.

ಕಲ್ಲು ಎಸೆದು ತಲೆ ಬೋಳಿಸಿಕೊಂಡರೆ, ಮೊದಲ ತಹಲ್ಲುಲ್ (ಇಹ್ರಾಮ್‌ನಿಂದ ಹೊರಬರುವುದು) ಪೂರ್ಣವಾಗುತ್ತದೆ. ಮಹಿಳೆಯರನ್ನು ಸಮೀಪಿಸುವುದು ಹೊರತುಪಡಿಸಿ ಇತರ ಎಲ್ಲವೂ ಇದರ ಮೂಲಕ ಹಲಾಲ್ ಆಗುತ್ತದೆ.

ನಂತರ ಮಕ್ಕಾಗೆ ಹೋಗಿ ತವಾಫುಲ್-ಇಫಾದಾ ನಿರ್ವಹಿಸಬೇಕು. ನಂತರ, ತಮತ್ತುಅ ಅಥವಾ

ಇಫ್ರಾದ್ ವಿಧದಲ್ಲಿ ಹಜ್ಜ್ ನಿರ್ವಹಿಸುವವರು, ಅಥವಾ ಕಿರಾನ್ ವಿಧದಲ್ಲಿ ಹಜ್ಜ್ ನಿರ್ವಹಿಸುತ್ತಿದ್ದು ತವಾಫುಲ್ ಕುದೂಮ್ ನಿರ್ವಹಿಸಿದ ನಂತರ ಸಈ ಮಾಡಿರದವರು ಹಜ್ಜ್‌ನ ಸಈ ನಿರ್ವಹಿಸಬೇಕು. ತವಾಫ್ ಮತ್ತು ಸಈಯನ್ನು ರಾತ್ರಿ ಸಮಯಕ್ಕೆ ಅಥವಾ ಮರುದಿನಕ್ಕೆ, ಯಾವುದು ಅನುಕೂಲಕರವೋ ಹಾಗೆ ಮುಂದೂಡಲು ಅನುಮತಿಯಿದೆ.

## ಐದನೆಯದಾಗಿ: ತಶ್ರೀಖ್ ದಿನಗಳಲ್ಲಿ ಮಾಡುವ ಕರ್ಮಗಳು

ಕಲ್ಲು ಎಸೆದು, ತಲೆ ಬೋಳಿಸಿಕೊಂಡು, ತವಾಫ್ ಮತ್ತು ಸಈ ನಿರ್ವಹಿಸಿದರೆ, ಇಹ್ರಾಮ್‌ನಿಂದ ಸಂಪೂರ್ಣ ತಹಲ್ಲುಲ್ ಆಗುತ್ತದೆ. ನಂತರ ಮಹಿಳೆಯರನ್ನು ಸಮೀಪಿಸುವುದು ಒಳಗೊಂಡಂತೆ ಎಲ್ಲವೂ ಹಲಾಲ್ ಆಗುತ್ತದೆ.

ನಂತರ, ಮಿನಾಕ್ಕೆ ಹಿಂತಿರುಗಿ ಹನ್ನೊಂದನೇ, ಹನ್ನೆರಡನೇ ಮತ್ತು ವಿಳಂಬ ಮಾಡುವುದಾದರೆ ಹದಿಮೂರನೇ ರಾತ್ರಿಗಳನ್ನು ಅಲ್ಲಿ ಕಳೆಯಬೇಕು.

ಮಧ್ಯಾಹ್ನದ ನಂತರ ಮೂರು ಜಮ್ರಾಗಳಿಗೂ ಕಲ್ಲು ಎಸೆಯಬೇಕು.

ಹನ್ನೊಂದನೇ ದಿನದಂದು ಮೊದಲ ಜಮ್ರಾಕ್ಕೆ ಕಲ್ಲು ಎಸೆಯಬೇಕು. ಇದು ಮಕ್ಕಾದಿಂದ ದೂರವಿರುವ ಮತ್ತು ಮಸ್ಜಿದುಲ್-ಖೈಫ್‌ಗೆ ಹತ್ತಿರವಿರುವ ಜಮ್ರಾ. ಒಂದರ ನಂತರ ಒಂದರಂತೆ ಏಳು ಸಣ್ಣ ಕಲ್ಲುಗಳನ್ನು ಎಸೆಯಬೇಕು. ಪ್ರತಿ

ಕಲ್ಲನ್ನು ಎಸೆಯುವಾಗಲೂ ಅಲ್ಲಾಹು ಅಕ್ಬರ್ ಎಂದು ಹೇಳಬೇಕು. ನಂತರ ಸ್ವಲ್ಪ ಮುಂದೆ ಹೋಗಿ ತನಗೆ ಇಷ್ಟವಾದ ಯಾವುದೇ ಪ್ರಾರ್ಥನೆಯನ್ನು ದೀರ್ಘವಾಗಿ ಪ್ರಾರ್ಥಿಸಬೇಕು. ದೀರ್ಘ ಹೊತ್ತು ನಿಲ್ಲುವುದು ಮತ್ತು ಪ್ರಾರ್ಥಿಸುವುದು ಕಷ್ಟವಾದರೆ, ಸುನ್ನತ್ ಅನ್ನು ಪಡೆಯುವುದಕ್ಕಾಗಿ ಸರಳವಾದ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು. ಅದು ಸ್ವಲ್ಪ ಸಮಯದವರೆಗಾದರೂ ಪರವಾಗಿಲ್ಲ.

ನಂತರ, ಮಧ್ಯದಲ್ಲಿರುವ ಜಮ್ರಾಕ್ಕೆ ಅದೇ ರೀತಿ ಕಲ್ಲು ಎಸೆಯಬೇಕು ಮತ್ತು ನಂತರ ಪ್ರಾರ್ಥಿಸಬೇಕು.

ನಂತರ, ಜಮ್ರತುಲ್-ಅಖಬಾಕ್ಕೆ ಅದೇ ರೀತಿ ಕಲ್ಲು ಎಸೆಯಬೇಕು. ಆದರೆ ಅದರ ನಂತರ ಪ್ರಾರ್ಥಿಸಲು ನಿಲ್ಲದೆ ಅಲ್ಲಿಂದ ಹೊರಡಬೇಕು.

ನಂತರ, ಹನ್ನೊಂದನೇ ದಿನದಂತೆಯೇ ಹನ್ನೆರಡನೇ ದಿನದಂದು ಕೂಡ ಜಮ್ರಾಗಳಿಗೆ ಕಲ್ಲು ಎಸೆಯಬೇಕು. ಜಮ್ರಾಗಳಿಗೆ ಕಲ್ಲು ಎಸೆಯುವುದನ್ನು ಪೂರ್ಣಗೊಳಿಸಿದ ನಂತರ ಮಿನಾದಿಂದ ಹೊರಡಲು ಬಯಸುವವರು ಹೊರಡಬಹುದು.

ಮಿನಾ ಬಿಟ್ಟು ಹೊರಡದೆ ಒಂದು ದಿನ ವಿಳಂಬ ಮಾಡಲು ಬಯಸುವವರು ಹದಿಮೂರನೇ ರಾತ್ರಿಯನ್ನು ಅಲ್ಲಿ ಕಳೆದು, ಹಿಂದಿನ ದಿನಗಳಂತೆ ಮಧ್ಯಾಹ್ನದ ನಂತರ ಮೂರು ಜಮ್ರಾಗಳಿಗೆ ಕಲ್ಲು ಎಸೆಯಬೇಕು. ಈ ರೀತಿ ವಿಳಂಬ ಮಾಡುವುದು ಶ್ರೇಷ್ಠವಾಗಿದೆ.

ಹನ್ನೆರಡನೇ ದಿನದಂದು ಸೂರ್ಯಾಸ್ತವಾದಾಗ ಮಿನಾದಲ್ಲಿರುವವರ ಹೊರತು ಇತರ ಯಾರಿಗೂ ಹದಿಮೂರನೇ ದಿನದವರೆಗೆ ವಿಳಂಬ ಮಾಡುವುದು ಕಡ್ಡಾಯವಿಲ್ಲ. (ಹನ್ನೆರಡನೇ ದಿನ ಸೂರ್ಯಾಸ್ತವಾದಾಗ ಮಿನಾದಲ್ಲಿರುವವರು ಮರುದಿನ) ಮಧ್ಯಾಹ್ನದ ನಂತರ ಮೂರು ಜಮ್ರಾಗಳಿಗೂ ಕಲ್ಲು ಎಸೆಯುವುದು ಕಡ್ಡಾಯವಾಗಿದೆ.

ಆದರೆ ಹನ್ನೆರಡನೇ ದಿನದಂದು ಸೂರ್ಯಾಸ್ತವಾಗುವ ತನಕ ಮಿನಾದಲ್ಲಿರುವವರು, ಹಾಗೆ ಇದ್ದಿದ್ದು ತಮ್ಮ ಸ್ವಇಚ್ಛೆಯಿಂದ ಅಲ್ಲದಿದ್ದರೆ, ಅಂದರೆ, ಉದಾಹರಣೆಗೆ ಅವರು ಮಿನಾದಿಂದ ಹೊರಡಲು ವಾಹನವನ್ನು ಹತ್ತಿದ್ದರೂ ಸಹ ವಾಹನಗಳ ದಟ್ಟಣೆ ಇತ್ಯಾದಿಗಳಿಂದ (ಸೂರ್ಯಾಸ್ತದ ತನಕ) ಮಿನಾದಲ್ಲೇ ಉಳಿದರೆ; ಅವರು ವಿಳಂಬ ಮಾಡುವುದು (ಹದಿಮೂರನೇ ದಿನ ಕೂಡ ಮಿನಾದಲ್ಲಿ ತಂಗುವುದು) ಕಡ್ಡಾಯವಿಲ್ಲ. ಏಕೆಂದರೆ ಸೂರ್ಯಾಸ್ತದವರೆಗೆ ಅವರು ಮಿನಾದಲ್ಲಿ ಉಳಿದದ್ದು ಅವರ ಸ್ವಇಚ್ಛೆಯಿಂದಾಗಿರಲಿಲ್ಲ.

## ಆರನೆಯದಾಗಿ: ವಿದಾಯದ ತವಾಫ್:

ಮಕ್ಕಾದಿಂದ ಊರಿಗೆ ಹೊರಡಲು ಬಯಸುವವರು, ವಿದಾಯದ ತವಾಫ್ ಮಾಡುವವರೆಗೆ ಮಕ್ಕಾದಿಂದ ಹೊರಡಬಾರದು.

ಆದರೆ, ಮುಟ್ಟಾದ ಮತ್ತು ಹೆರಿಗೆ ಸ್ರಾವವಿರುವ ಮಹಿಳೆಯರನ್ನು ಇದರಿಂದ ಹೊರತುಪಡಿಸಲಾಗಿದೆ.

ಅವರು ವಿದಾಯದ ತವಾಫ್ ನಿರ್ವಹಿಸಬೇಕಾಗಿಲ್ಲ. ಹಾಗೆಯೇ ಅವರು ವಿದಾಯಕ್ಕಾಗಿ ಮಸ್ಜಿದುಲ್-ಹರಾಮ್‌ನ ಬಾಗಿಲಲ್ಲಿ ನಿಲ್ಲುವುದನ್ನೂ ಮಾಡಬಾರದು. ಏಕೆಂದರೆ, ಇದು ಪ್ರವಾದಿ (ಸ) ರಿಂದ ವರದಿಯಾಗಿಲ್ಲ.

ಊರಿಗೆ ಪ್ರಯಾಣ ಹೊರಡುವುದಾದರೆ, ಕಅಬಾದಲ್ಲಿ ವಿದಾಯದ ತವಾಫ್ ನಿರ್ವಹಿಸುವುದು ಅವರ ಕೊನೆಯ ಕರ್ಮವಾಗಿರಬೇಕು.

ವಿದಾಯದ ತವಾಫ್ ನಿರ್ವಹಿಸಿದ ನಂತರ, ತಮ್ಮ ಸಹಚರರಿಗಾಗಿ ಕಾಯಲು ಅಥವಾ ತಮ್ಮ ಸಾಮಾನುಗಳನ್ನು ತುಂಬಲು ಅಥವಾ ದಾರಿಯಲ್ಲಿ ಏನನ್ನಾದರೂ ಖರೀದಿಸಲು ಉಳಿದುಕೊಂಡರೆ, ಅದರಲ್ಲಿ ತೊಂದರೆ ಇಲ್ಲ. ತಮ್ಮ ಪ್ರಯಾಣವನ್ನು ಮುಂದೂಡಲು ಉದ್ದೇಶಿಸದ ಹೊರತು ಅವರು ಪುನಃ ವಿದಾಯದ ತವಾಫ್ ನಿರ್ವಹಿಸಬೇಕಾಗಿಲ್ಲ. ಉದಾಹರಣೆಗೆ, ಒಬ್ಬ ವ್ಯಕ್ತಿ ಬೆಳಿಗ್ಗೆ ಪ್ರಯಾಣ ಹೊರಡಲು ಉದ್ದೇಶಿಸಿ ವಿದಾಯದ ತವಾಫ್ ಮಾಡುತ್ತಾರೆ. ನಂತರ ಅವನು ಪ್ರಯಾಣವನ್ನು ಸಂಜೆಯವರೆಗೆ ಮುಂದೂಡಿದರೆ, ಆಗ ಅವನು ಪುನಃ ವಿದಾಯದ ತವಾಫ್ ನಿರ್ವಹಿಸುವುದು ಕಡ್ಡಾಯವಾಗಿದೆ. ಆ ತವಾಫ್ ಕಅಬಾದಲ್ಲಿ ನಿರ್ವಹಿಸುವ ಅವನ ಕೊನೆಯ ಕರ್ಮವಾಗುವುದಕ್ಕಾಗಿ.

ನಮ್ಮ ಪ್ರವಾದಿ ಮುಹಮ್ಮದ್ ರವರ ಮೇಲೆ ಅಲ್ಲಾಹು ಶಾಂತಿ ಮತ್ತು ಕರುಣೆ ವರ್ಷಿಸಲಿ

# ಪರಿವಿಡಿ

ಹಜ್ಜ್ ನಿರ್ವಹಿಸುವ ವಿಧಾನ - ಸಂಕ್ಷಿಪ್ತವಾಗಿ................................2
ಮುನ್ನುಡಿ ........................................................................2
ಮೊದಲನೆಯದಾಗಿ: ಆರಾಧನೆಯು ಸ್ವೀಕಾರವಾಗಲು ಷರತ್ತುಗಳು:.....................................................................2
ಮೊದಲನೆಯದಾಗಿ: ಮೀಖಾತ್‌ನ ನಿಯಮಗಳು:........................4
ಎರಡನೆಯದಾಗಿ: ಹಜ್ಜ್ ಕರ್ಮದ ವಿಧಗಳು ಮತ್ತು ಅವುಗಳ ನಿಯಮಗಳು:.....................................................................5
ಮೂರನೆಯದಾಗಿ: ಇಹ್ರಾಮ್ ಪ್ರವೇಶಿಸುವ ವಿಧಾನ ಮತ್ತು ಅದರ ನಿಯಮಗಳು: ..........................................................7
ನಾಲ್ಕನೆಯದಾಗಿ: ಇಹ್ರಾಮ್‌ನ ನಿಷಿದ್ಧಗಳು ................................ 11
ಐದನೆಯದಾಗಿ: ತವಾಫ್ ಮಾಡುವ ವಿಧಾನ ............................. 13
ಆರನೆಯದಾಗಿ: ಸಈ ಮಾಡುವ ವಿಧಾನ ................................... 16
ಹಜ್ಜ್ ನಿರ್ವಹಿಸುವ ವಿಧಾನ........................................................ 21
ಮೊದಲನೆಯದಾಗಿ: ಹಜ್ಜ್‌ಗಾಗಿ ಇಹ್ರಾಮ್‌ಗೆ ಪ್ರವೇಶಿಸುವುದು:21
ಎರಡನೆಯದಾಗಿ: ಮಿನಾದಲ್ಲಿ ರಾತ್ರಿ ಕಳೆಯುವುದು:................ 23
ಮೂರನೆಯದಾಗಿ: ಅರಫಾದಲ್ಲಿ ನಿಲ್ಲುವುದು ಮತ್ತು ಮುಝ್ದಲಿಫಾದಲ್ಲಿ ರಾತ್ರಿ ಕಳೆಯುವುದು:................................... 24
ನಾಲ್ಕನೆಯದಾಗಿ: ಈದ್ ದಿನದ ಕರ್ಮಗಳು ................................ 27
ಐದನೆಯದಾಗಿ: ತಶ್ರೀಖ್ ದಿನಗಳಲ್ಲಿ ಮಾಡುವ ಕರ್ಮಗಳು ... 28
ಆರನೆಯದಾಗಿ: ವಿದಾಯದ ತವಾಫ್: ......................................... 30

kn410v3.0 - 06/09/2026